ನೀವು ತಿಳಿದ ಹಾಗೆ ಇವತ್ತು ಪೇಪರಿನಲ್ಲಿ 5 ಸಾವಿರ ಕೋಟಿ, 500 ಕೋಟಿ ಎಲ್ಲಾ ಸ್ವಿಸ್ ಬ್ಯಾಂಕಿಗೆ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಒಂದು ಸಣ್ಣ ಮೊತ್ತವನ್ನು ಗ್ರಾಮೀಣಾಭಿವೃದ್ಧಿಗೆ ಹಾಕಿದರೆ, ನಾನು ಪ್ರಾಥಮಿಕ ಶಿಕ್ಷಣದ ಬಗ್ಗೆ ಇಲ್ಲಿ ಮಾತನಾಡುವುದಕ್ಕೆ ಇಚ್ಛಿಪಡುವುದಿಲ್ಲ. ಅವರಿಗೆ ಶಿಕ್ಷಣವೂ ಇಲ್ಲ, ಹಣಕಾಸಿನ ಸೌಲಭ್ಯವೂ ಇಲ್ಲ, ಅಥವಾ ನೀವು ಸರ್ಕಾರ ಹಾಕಿದ ಯಾವುದೇ ಯೋಜನೆಯೂ ಅವರಿಗೆ ಎಲ್ಲೂ ಮುಟ್ಟದೆ ದೊಡ್ಡ ಪ್ರಮಾಣದಲ್ಲಿ ಅವರಿಗೆ ವಂಚನೆ ಮಾಡುತ್ತಿದ್ದೇವೆ. ನಿಜವಾಗಿಯೂ ಶಾಸಕನಾಗಿ ನಾನು ಹೇಳುವುದಿದ್ದರೆ ಸರ್ಕಾರದ ಯೋಜನೆಗಳನ್ನು ನೋಡುವಾಗ ಬಹಳ ಸಂತೋಷವಾಗುತ್ತದೆ. ಮಾನವೀಯತೆ ದೃಷ್ಟಿಯಿಂದ, ಸರ್ಕಾರದಲ್ಲಿ ಜನಸೇವೆ ಮಾಡುವಂತಹ ಮನೋಭಾವನೆ ಇದೆ, ನಾನು ಒಬ್ಬ ಶಾಸಕನಾಗಿ ಜನಸೇವೆ ಮಾಡುವಂತಹ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ತಿಳಿದುಕೊಂಡರೆ ನಿಜವಾಗಿಯೂ ಅಲ್ಲಿ ಆಗುವುದನ್ನು ನೋಡಿದರೆ ಬಂಡವಾಳಶಾಹಿಗಳು ಗುತ್ತಿಗೆದಾರರು ಅಧಿಕಾರಿವರ್ಗದವರು ರಾಜಕಾರಣಿಗಳು ಜಾತಿವಂತರು ಇಂಥವರಿಗೆ ಬಿಟ್ಟರೆ ಪ್ರಾಮಾಣಿಕವಾಗಿ ಜನರಿಗೆ ನಾವು ಸೇವೆ ಮಾಡುತ್ತಿಲ್ಲ. ಅದರಲ್ಲೂ ಹಿಂದುಳಿದ ವರ್ಗದವರ ಬಗ್ಗೆ ಯಾವ ತರಹದ ಸೇವೆಯೂ ಆಗುತ್ತಿಲ್ಲ ಧೈರ್ಯದಿಂದ ನಾನು ಹೇಳಲು ಇಚ್ಛಿಪಡುತ್ತೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ಹೆಚ್ಚಿನ ಸಂಖ್ಯೆಯಲ್ಲಿ ಮಂತ್ರಿಗಳೂ ಇದ್ದಾರೆ ಕಾಗದ ಕೆಲಸಕ್ಕೆ ಹೆಚ್ಚು ಅವಕಾಶಕೊಡದೆ ಪ್ರಾಮಾಣಿಕವಾಗಿ ಜಿಲ್ಲಾಧಿಕಾರಿಗಳಾಗಲಿ ಯಾವುದೇ ಅಧಿಕಾರಿಗಳಾಗಲಿ ಏಕೆಂದರೆ ಪಟ್ಟಣದಲ್ಲಿ ಎಷ್ಟು ದಿವಸ ಅವರು ಸೇವೆ ಮಾಡುತ್ತಾರೆ, ಹಳ್ಳಿಗೆ ಎಷ್ಟು ದಿವಸ ಹೋಗುತ್ತಾರೆ, ಎಷ್ಟು ವಿಸಿಟ್ ಮಾಡಿದ್ದಾರೆ, ಒಂದು ಸಲ ಹೋದಾಗಲೂ ಅಲ್ಲಿ ಏನು ನಡೆಯುತ್ತದೆ, ಅಲ್ಲಿ ಸಾಮಾಜಿಕ ನ್ಯಾಯ ಇದೆಯ ಅಥವಾ ಅಲ್ಲಿ ಜನರಿಗೆ ಬೇಕಾದ ಮೂಲಭೂತ ಸೌಕರ್ಯಗಳಿದೆಯೋ, ಏಕೆಂದರೆ ಅಲ್ಲಿ ಅವರನ್ನು ಕೇಳುವವರು ಇಲ್ಲ, ಅವರಿಗೆ ಒತ್ತಡ ತರುವವರು ಇಲ್ಲ ಎಲ್ಲಾ ನಿಮ್ಮನ್ನು ಗೌರವಿಸುತ್ತಾರೆ ಪೂಜಿಸುತ್ತಾರೆ. ದಯಮಾಡಿ ಅಂಥವರಿಗೆ ದ್ರೋಹ ಮಾಡದೆ ಅಂಥವರ ಸೇವೆ ಮಾಡುವಂತಹ ಮನೋಭಾವನೆಯನ್ನು ಬೆಳೆಸಿಕೊಂಡು ಹೋಗಬೇಕೆಂದು ನನ್ನ ನಾಯಕರಲ್ಲಿ ಹಾಗೂ ಅಧಿಕಾರಿಗಳಲ್ಲಿ ಕಳಕಳಿಯಿಂದ ಕೇಳಿ ನನಗಿಲ್ಲಿ ಎರಡು ಮಾತು ಆಡಲು ಅವಕಾಶ ಕೊಟ್ಟ ನಿಮಗೆಲ್ಲರಿಗೂ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

ಮುಖ್ಯಮಂತ್ರಿಗಳ ಹೇಳಿಕೆ

ನರಹಂತಕ ವೀರಪ್ಪನ್ ವಿಚಾರದಲ್ಲಿ ತಮಿಳುನಾಡು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸಿದ ಅಂಶಗಳು

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಮಾಡುವರು.

+ ಶ್ರೀ ಜೆ.ಎಚ್. ಪಟೇಲ್ (ಮುಖ್ಯಮಂತ್ರಿಗಳವರು) : ಅಧ್ಯಕ್ಷರೇ, ನಿನ್ನೆ ತಮಿಳುನಾಡಿನ ಮುಖ್ಯಮಂತ್ರಿಗಳು ನಡೆಸಿದ ಮಾತುಕತೆಯ ಪ್ರಕಾರ ಬೆಳಿಗ್ಗೆ ನಾನು ಕಾನೂನುಮಂತ್ರಿಗಳು ಅರಣ್ಯಮಂತ್ರಿಗಳು ಗೃಹಖಾತೆಸಚಿವರು ಹೋಗಿ ನಮ್ಮ ಡಿಜಿ ಪೋಲಿಸ್, ಹೋಂ ಸೆಕ್ರೆಟರಿ ಹೋಗಿ

ವೀರಪ್ಪನ್‌ನಿಂದ ಏನು ಷರತ್ತು ಬಂದಿದೆ ಎಂದು ಚರ್ಚೆ ಮಾಡಿದೆವು. ಆತನಿಂದ ಬಂದಿರುವ ಷರತ್ತುಗಳು ಅವಾಸ್ತವಿಕ. ಆದರೆ ನಾವು ಈ ಕೆಲವು ತೀರ್ಮಾನಗಳನ್ನು ಮಾಡಿದ್ದೇವೆ. ಅದಕ್ಕೆ ತಾವು ಒಪ್ಪಿದರೆ ನಾವೀಗ ಆತನಿಗೆ ಮೆಸೇಜ್ ಕಳುಹಿಸುತ್ತೇವೆ. ಅದಷ್ಟು ಬೇಗ ಹೊಸ್ಟೇಜಸ್ ಅನ್ನು ಬಿಡುಗಡೆ ಮಾಡುವಂತೆ ಪ್ರಯತ್ನ ಮಾಡುತ್ತೇವೆ ಹಾಗೆಂದು ಹೇಳಿ ಅವರು ಏನು ಆತನಿಗೆ ಕಳುಹಿಸಬೇಕಾದ ಡ್ರಾಫ್ಟ್ ಏನಿತ್ತು, ಅದನ್ನು ಓದಿದರು. ಅದನ್ನು ಸ್ವಲ್ಪ ತಿದ್ದುಪಡಿ ಮಾಡಿದ ಮೇಲೆ ಇಷ್ಟಾಯಿತು. A ministerial delagation lead by the Chief Minister of Karnataka had extensive discussion with the Hon'ble Chief Minister of Tamilnadu in Chennai on 19/8/1997. Both States were assisted by senior officials of respective Governments. After deliberations of both the Chief Ministers the following was decided:

1. Both the Governments accept the surrender of Veeerappan and his associates and assure protection ot their lives;
2. Veerappan and his associates will be kept in a special camp in Tamilnadu guarded by police and jail authorities;
3. The period of confinement of Veerappan and his associates in the special camp will be minimum as per the law;
4. All persons who have been arrested in connection with the investigation of Veerappan cases will be released if there are no specific charges against them. Secondly, if there are specific charges, a review of such cases will be taken up immediately, and a decision is taken. In any case, all such persons are released on bail subject to law;
5. Rehabilitation package of Veerappan relatives will be considered sympathetically.
6. All cases registered in Karnataka will be transferred to the courts of Tamilnadu after getting necessary clearance according to the law from the appropriate courts;
7. The Government of Karnataka will not demand the presence of Veerappan in Karnataka for any reason;
8. Both the Governments desire that in order to create goowill and congenial atmosphere, Veerappan should immediately release all the hostages unharmed.

ಇಷ್ಟು ವಿಷಯವನ್ನು ಮುಖ್ಯಮಂತ್ರಿಗಳೂ, ಆಫೀಸರ್ಸ್ ಇವತ್ತು ಆ ನಕ್ಕೀರನ್ ಪತ್ರಿಕೆಯ ಗೋಪಾಲರನ್ನು ಕರೆಸಿ ಇದರ ಆಧಾರದ ಮೇಲೆ ಎಲ್ಲಿ ಮತ್ತು ಯಾವಾಗ ಸರೆಂಡರ್ ಆಗುತ್ತಾನೆ ಎಂದು ತಿಳಿಸಿದರೆ ನಾವು ತಿಳಿದ ವ್ಯವಸ್ಥೆಯಲ್ಲಾ ಮಾಡುತ್ತೇವೆ ಎಂಬುದಕ್ಕೆ ತಮಿಳುನಾಡು ಸರ್ಕಾರ ಒಪ್ಪಿಕೊಂಡಿದೆ. ಬಹುಶಃ ಎರಡು ಮೂರು ದಿನದೊಳಗಾಗಿ ಮೆಸೇಜ್ ಬರಬಹುದು. ಆ ಗೋಪಾಲ್ ಸಹ ನಮ್ಮಿಬ್ಬರ ಎದುರಿಗೆ ಬಂದರು, ಕೆಲವೆಲ್ಲಾ ರಾಷ್ಟ್ರಪತಿಗಳು ಬರೆದುಕೊಡಬೇಕು ಎಂದು ಅದೆಲ್ಲಾ ಆಗುವುದಿಲ್ಲ ಎಂದೆವು. ಸರೆಂಡರ್ ಆಗುವುದಕ್ಕೆ ಒಪ್ಪಿದ್ದಾನೆ, ಸ್ಥಳ ಮತ್ತು ಸಮಯವನ್ನು ನಾನು ಎರಡು ಮೂರು ದಿನದೊಳಗಾಗಿ ತಿಳಿಸುತ್ತೇನೆ ಎಂದು ಹೇಳಿದ್ದಾನೆ. ಆದ್ದರಿಂದ ಅಧ್ಯಕ್ಷರೇ, ನಾನು ಇಲ್ಲಿ ಯಾವುದೇ ಸಂಶಯಪಟ್ಟಿಲ್ಲ. ಆತ ಎಷ್ಟೇ ಕೆಟ್ಟದ್ದು ಮಾಡಿದ್ದಾನೆ, ಖೂನಿ ಕ್ರೂರಿ ಎಲ್ಲಾ ಮಾಡಿದ್ದಾನೆ ಆದರೆ ಈಗಲೂ ಸಹ ಕರ್ನಾಟಕ ರಾಜ್ಯದ ವತಿಯಿಂದ ಇದನ್ನು ನೋಡಿದ್ದು ಇದೊಂದು ಸಮಸ್ಯೆಗೆ ಸಂಪೂರ್ಣ ಪರಿಹಾರ ಒಂದುಸಲ ಸಿಕ್ಕಿಬಿಡಲಿ, ಪುನಃ ಪುನಃ ಅದನ್ನೇ ನಾವು ರೇಕಪ್ ಮಾಡಿಕೊಂಡು ಅಂತಹ ಒಬ್ಬ ವ್ಯಕ್ತಿಯನ್ನು ನಾವು ಹಿಡಿಯಲಿಕ್ಕೂ ಆಗಲಿಲ್ಲ ಕೊಲ್ಲಲಿಕ್ಕೂ ಆಗಲಿಲ್ಲ, ಆತ ಶರಣಾಗತನಾಗಿ ಬಂದಾಗ ಸಣ್ಣಪುಟ್ಟ ವಿಚಾರಗಳನ್ನು ಗಮನಕ್ಕೆ ತೆಗೆದುಕೊಳ್ಳಬಾರದು ಎಂದು ಅವರು ತಮಿಳುನಾಡಿನಲ್ಲೇ ಇಟ್ಟುಕೊಳ್ಳಲಿ ಅಲ್ಲೇ ಟ್ರಯಲ್ ಮಾಡಲಿ, ಐಪಿಸಿ ತಮಿಳುನಾಡಿನಲ್ಲಿ ಬೇರೆ ಕರ್ನಾಟಕದಲ್ಲಿ ಬೇರೆ ಅಲ್ಲ. ಅದಕ್ಕೆ ಕರುಣಾನಿಧಿಯವರಿಗೆ ಇಷ್ಟು ಹೇಳಿದ್ದೇನೆ. ಮೊದಲು ಹೋಸ್ಟೇಜಸ್ ಬಂದು ನಮಗೆ ಸೇಫಾಗಿ ತಲುಪಬೇಕು.ಅವರು ಹೇಳಿದರು, ಇಬ್ಬರು ಮುಖ್ಯಮಂತ್ರಿಗಳ ಎದುರಿಗೆ ಬಂದು ಸರೆಂಡರ್ ಆಗುತ್ತೇನೆ, ನನ್ನ ವೆಪನ್ ಎಲ್ಲಾ ಅಲ್ಲೇ ಇಡುತ್ತೇನೆ 8 ಜನರನ್ನೂ ಅಲ್ಲೇ ಒಪ್ಪಿಸುತ್ತೇನೆ ಎಂದು ಹೇಳಿದ್ದಾನಂತೆ. ಏನೇ ಆಗಲಿ, ಈ 8 ಜನರ ಪ್ರಾಣ, ಅವರ ಸಂಬಂಧಿಕರು ಕುಟುಂಬದವರು ಇವತ್ತು ನಿಟ್ಟುಸಿರು ಬಿಟ್ಟು ಹೀಗಾಯಿತು ಎಂದು ಹೇಳುವುದು ಒಂದು ಆಮೇಲೆ ಇನ್ನೂ ಮಾನ್ಯ ಸದಸ್ಯನಕ್ಕೆ, ಆತ ಒಬ್ಬನನ್ನು ಹತೋಟಿಯಲ್ಲಿಡುವುದಕ್ಕೆ ನಾವು ಎಷ್ಟು ಖರ್ಚು ಮಾಡಿದ್ದೇವೆ ಎಂದರೆ ಬಹಳ ಆಶ್ಚರ್ಯವಾಗಬಹುದು, ಅಷ್ಟೊಂದು ದುಡ್ಡು ಖರ್ಚಾಗಿದೆ. ಇಂತಹ ಒಂದು ವಿಪತ್ತು ಪರ್ಮನೆಂಟಾಗಿ ಪರಿಹಾರವಾಗುವಂತಹ ಶುಭಸೂಚನೆ ನಾನು ಅದಕ್ಕೋಸ್ಕರ I thank the Chief Minister of Tamil Nadu also ಏಕೆಂದರೆ ಅವರ ಸಹಕಾರ ಇಲ್ಲದೆ ನಾವೇನು ಮಾಡಿದರೂ ಆಗುವುದಿಲ್ಲ. ತಮಿಳುನಾಡು ಸರ್ಕಾರದ, ಪೋಲಿಸರ ಸಹಕಾರ ಇಲ್ಲದೆ... ನಾವು ಏನು ಮಾಡಿದರೂ ಆಗುವುದಿಲ್ಲ. ಈ ಎಲ್ಲಾ ವಾಸ್ತವಿಕ ಸ್ಥಿತಿಗಳನ್ನು ಮನಗಂಡು ಈ ವಿಪತ್ತು ಪರಿಹಾರವಾಯಿತು ಎನ್ನುವ ಮಾತನ್ನು ಈಗ ಮಾತುಕತೆ ಮಾಡಿಕೊಂಡು ಬಂದಮೇಲೆ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಆಮೇಲೆ ಸಮಯ, ಎಲ್ಲಿ ಹೇಗೆ, ಏನು ಎಂಬ ವಿಷಯವನ್ನು ಈ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ಮೇಲೆ ನಾನು ತಮಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಈ ಒತ್ತೆಯಾಳುಗಳನ್ನು ಬದುಕಿಸಬೇಕು, ಅವರ ಜೀವವನ್ನು ಉಳಿಸಬೇಕು ಎನ್ನುವುದರಲ್ಲಿ ಎರಡು ಅಭಿಪ್ರಾಯ ಇಲ್ಲ. ಅವರು ಜೀವಂತವಾಗಿ ಇರಬೇಕು, ಸುರಕ್ಷಿತವಾಗಿ ಇರಬೇಕು, ಅವರನ್ನು ಸುರಕ್ಷಿತವಾಗಿ ನಾವು ಕರೆದುಕೊಂಡು ಬರಬೇಕು ಎಂಬುದೇ ಎಲ್ಲರ ಆತಂಕ. ಮತ್ತು ಇಡೀ ದೇಶ ಈ ಕಡೆ ಕಣ್ಣಿಟ್ಟು ನೋಡುತ್ತಾ ಇದೆ. ಆದರೆ ನನ್ನ

ಬೇಸಿಕ್ ಅಬ್ಜೆಕ್ಷನ್ ಏನೆಂದರೆ ಮುಖ್ಯಮಂತ್ರಿಗಳು ಈ ಸದನ ನಡೆಯುವಾಗ ಕನಿಷ್ಪಪಕ್ಷ ಯಾವ ಯಾವ ಕಾರಣಕ್ಕಾಗಿ ತಾವು ಎಲ್ಲಿ ಸೇರುತ್ತಾ ಇದ್ದೀರಾ ಎನ್ನುವ ವಿಷಯವನ್ನು ತಿಳಿಸುವಂತಹ ಸೌಜನ್ಯ ಕೂಡ ಇಲ್ಲ ಎನ್ನುವುದೇ ನಮ್ಮ ವ್ಯಥೆ. ತಮಗೆ ಗೊತ್ತಿದೆ, ಹೋದ ಸಲ ತಾವು ಕಾವೇರಿ ನೀರಿನ ಮಾತುಕತೆ ಬಗ್ಗೆ ಹೋದಾಗ ಕರುಣಾನಿಧಿ ಅವರಿಗೆ ಪತ್ರಿಕೆಯವರು ಕೇಳಿದರು. ತಾವು ಮತ್ತು ಮುಖ್ಯಮಂತ್ರಿಗಳು ಮಾತುಕತೆ ನಡೆಸಿದಿರಿ, ಆ ವಿಷಯದ ಬಗ್ಗೆ ತಮ್ಮ ಅಬಿಪ್ರಾಯ ಏನು ಎಂದು ಕೇಳಿದಾಗ ಆ ಸಮಯದಲ್ಲಿ ಸದನ ನಡೆದಿತ್ತು. ಆಗ ಕರುಣಾ ನಿಧಿ ಅವರು ಹೇಳಿದರು, ಸದನ ನಡೆದಿದೆ, the House is in session. ನಾನು ಏನು ಹೇಳಬೇಕು ಅದನ್ನು ಸದನದಲ್ಲಿ ಹೇಳುತ್ತೇನೆ, ಹೊರಗಡೆ ಹೇಳುವುದಿಲ್ಲ ಎಂದು ಈ ಮಾತನ್ನು ಹೇಳಿ ಅವರು ಸದನಕ್ಕೆ ಗೌರವವನ್ನು ತೋರಿಸತಕ್ಕಂಥದ್ದನ್ನು ಮಾಡಿದರು. ಆದರೆ ಇಲ್ಲಿ ನಾವು ಏನಾದರೂ ವಿಷಯ ತಿಳಿದುಕೊಳ್ಳಬೇಕು ಎಂದರೆ ಅದನ್ನು ಪತ್ರಿಕೆಯಲ್ಲಿ ಓದಿ ತಿಳಿದುಕೊಳ್ಳಬೇಕು, ಇಲ್ಲಾ ದೂರದರ್ಶನದಲ್ಲಿ ಬಂದ ಮೇಲೆ ನಮಗೆ ಗೊತ್ತಾಗುತ್ತದೆ. ಈ ವಿಷಯ ಶಾಸಕರಿಗೆ ಅಥವಾ ಮಂತ್ರಿಗಳಿಗೂ ಕೂಡ ಬಹುಶಃ ಗೊತ್ತಿರಬಹುದು. ಎಲ್ಲರಿಗೂ ಗೊತ್ತಾಗುವುದು ಯಾವಾಗ ಎಂದರೆ, ಯಾವುದೇ ಒಂದು ಪತ್ರಿಕೆಯಲ್ಲಿ ಬಂದಾಗ, ನಾವು ಓದಿಕೊಂಡು, ತಿಳಿದುಕೊಂಡು ಮತ್ತು ದೂರದರ್ಶನದಲ್ಲಿ ಬಂದ ಮೇಲೆ ಅವರ ಬಗ್ಗೆ ಮಾಹಿತಿ ಸಿಗುತ್ತದೆ. ಅಲ್ಲಿಯವರೆಗೆ ಏನೂ ಕೂಡ ಗೊತ್ತಿರುವುದಿಲ್ಲ. ತಾವು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳತಕ್ಕಂಥದ್ದು, ಅಥವಾ ದೂರದರ್ಶನದಲ್ಲಿ ತಾವು ಸಂದರ್ಶನ ನೀಡಿದಾಗ ಮಾತ್ರ ನಮಗೆ ವಿಷಯ ತಿಳಿಯುವುದು.

SRI J.H. PATEL : I would like to make it clear that after the meeting with the Chief Minister of Tamil Nadu, the first statement is this, on the Floor of the House, nowhere else.

SRI M. MALLIKARJUNA KHARGE : I will come to that. ಆದಕಾರಣ ನಾವು ವಿಷಯವನ್ನು ತಿಳಿದುಕೊಳ್ಳಬೇಕು ಎಂದರೆ ಹೊರಗಡೆಯೇ ತಿಳಿದುಕೊಳ್ಳಬೇಕು. ಸದನದಲ್ಲಿ ತಿಳಿದುಕೊಳ್ಳುವಂತಹ ಹಕ್ಕು ನಮಗೆ ಇಲ್ಲವೇ? ನೀವು ಏಕೆ ಈ ಸದನವನ್ನು ಇಷ್ಟು ಕಡೆಗಾಣಿಸುತ್ತಿದ್ದೀರಿ?

ಶ್ರೀ ಎನ್. ರಾಜಣ್ಣ : ಅಧ್ಯಕ್ಷರೆ, ಒಂದೂವರೆ ಗಂಟೆಗೆ ಮುಖ್ಯಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾರೆ, ಈಗ ಆಲ್‌ರೆಡಿ ಫೋರ್ ಕ್ಲಾಕ್‌ಗೆ ಈ ಸದನದಲ್ಲಿ ಬಂದು ಕುಳಿತಿದ್ದಾರೆ, ಏನು ಸಾರ್ ಇದು? ಎಷ್ಟು ಒಳ್ಳೆಯ ಕೆಲಸ ಮಾಡಿದರೂ ಸಹ ಏನಾದರೂ ಒಂದು ಹೇಳುತ್ತೇನೆ ಇರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಏಳು ಜನರನ್ನು ಬಿಡಿಸಿ, ಅವರ ಪರವಾಗಿ ಇವರನ್ನು ಕೊಟ್ಟು ಬನ್ನಿ.

ಮಾನ್ಯ ಸದಸ್ಯರು : ಒಬ್ಬ ಸದನದ ಸದಸ್ಯರಿಗೆ ವಿರೋಧ ಪಕ್ಷದ ನಾಯಕರು ಯಾವ ರೀತಿ ಸೌಜನ್ಯ ತೋರಿಸುತ್ತಾರೆ ನೋಡಿ, ಈ ರೀತಿಯಾಗಿ ಹೇಳುವಂಥದ್ದು ಅವರಿಗೆ ಗೌರವ ತರುವಂಥದ್ದಲ್ಲ. ಇವರಿಗೆ ಎಷ್ಟು ಹಕ್ಕು ಇದೆಯೋ ಅವರಿಗೂ ಅಷ್ಟೇ ಹಕ್ಕು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಈ ವಿಷಯ 12ಗಂಟೆ 05ನಿಮಿಷಕ್ಕೆ ಗೊತ್ತಾಗಿದೆ. ಅಂದರೆ ಈ ವಿಷಯ ಗೊತ್ತಾಗಬೇಕಾದರೆ, ಪ್ರೆಸ್ಸ್‌ನಲ್ಲಿ ತಾವಿಬ್ಬರೂ ಕುಳಿತುಕೊಂಡು ಹೇಳದೆ ಹೋಗಿದ್ದರೆ ಈ ವಿಷಯ ನಮಗೆ ಗೊತ್ತಾಗುತ್ತಿರಲಿಲ್ಲ. Both sides were assisted by the senior officers of their respective Governments. The Ministerial delegation led by the Hon'ble Chief Minister of Karnataka has extensive discussion with the Hon'ble Chief Minister of Tamil Nadu at Chennai, today. Both sides were assisted by the senior officials of their respective governments. After the deliberations, the Hon'ble Chief Minister decided. ಎಂದು ಹೇಳಿ,ಇದು ಎಲ್ಲಾ ಕಡೆ ಪತ್ರಿಕೆಯಲ್ಲಿ ಪಿ.ಟಿ.ಐ.ನಲ್ಲಿ ಬಂದಿದೆ, ಮುಂದೆ ಒಂದು ಪ್ರಶ್ನೆಯನ್ನು ಕೇಳಿದಾಗಲೂ ಕೂಡ ಹೇಳಿದಿರಿ, ಏನೆಂದರೆ "After his trial, verdict and imprisonment only, the President of India can amnesty, he added. Asked whether Veerapppan would also surrender all the wealth he had accumulated, Mr. Patel said, he was surrendering himself and one did not know about his accumulated wealth at this juncture. ಅಂದರೆ ಇದು ಕಂಟಿನ್ಯೂಯಸ್, ನೀವು ಓದು ಎಂದು ಹೇಳಿದರೆ ಬೇಕಾದರೆ ಓದುತ್ತೇನೆ. ಇಲ್ಲೇ ಹೇಳುತ್ತೇನೆ. Already you have stated outside the House. ಅಂದರೆ ಇವತ್ತು ಪುನಃ ಅದನ್ನು ಮನವರಿಕೆ ಮಾಡಿ ಕೊಡುತ್ತಿದ್ದೀರಿ. ನೀವು ಹೇಳುತ್ತಾ ಇದ್ದೀರಿ, ಇವತ್ತಿನ ದಿವಸ ನಾನು ಇಲ್ಲೇ ಹೇಳಿದ್ದೇನೆ, ಇದನ್ನು ಬಿಟ್ಟು ನಾನು ಎಲ್ಲೂ ಹೇಳಿಲ್ಲ, ಈ ರೀತಿ ಹೇಳುವುದು ಸರಿ ಅಲ್ಲ. ಅಂದರೆ ನಾವು ಯಾವ ಏಜೆನ್ಸಿಗಳನ್ನು ನಾವು ನಂಬುವ ಹಾಗೆ ಇಲ್ಲ, ಅಥವಾ ಮದ್ರಾಸ್‌ನಿಂದ ಬಂದಂತಹ ಫ್ಯಾಕ್ಸ್ ಸಹ ನಂಬುವ ಹಾಗೆ ಇಲ್ಲ, ಏಕೆಂದರೆ, ಅಧ್ಯಕ್ಷರೆ, 15-20 ನಿಮಿಷದ ಹಿಂದೆ ತಾವು ಇರಲಿಲ್ಲ, ಉಪಾಧ್ಯಕ್ಷರು ಇದ್ದರು ಆಗ ನಾನು ಹೇಳದೆ, ಈ ವಿಷಯದ ಪ್ರತಿ ನನ್ನ ಕೈಗೆ 12.05 ನಿಮಿಷಕ್ಕೆ ಸಿಕ್ಕಿತು, ಆದರೆ ನಾನು ಆಗ ಓದಿ ಹೇಳಬಹುದಾಗಿತ್ತು. ಆದರೂ ತಾವು ಬರುತ್ತಾ ಇದ್ದಾರೆ, ಕೇಳಿಕೊಂಡು ಹೇಳೋಣ ಎನ್ನುವ ದೃಷ್ಟಿಯಿಂದ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಆದರೆ ತಾವು ಏನನ್ನೂ ಹೇಳಿಲ್ಲ ಎಂದ ಮೇಲೆ, ಈ ಪಿ.ಟಿ.ಐ.ನವರು ಬೇರೆ ಎಲ್ಲಾ ಏಜೆನ್ಸಿಯವರು ಸುಳ್ಳು ರಿಪೋರ್ಟ್ ಕೊಟ್ಟಿದ್ದಾರಾ? ಅದಕ್ಕೆ ಈ ರೀತಿ....

ಶ್ರೀ ಜೆ.ಹೆಚ್. ಪಟೇಲ್ ಚೆನ್ನೈನಲ್ಲಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲೇ ಹೇಳಿರಬಹುದು, ಸದನ ನಡೆದಿದೆ ಅಧ್ಯಕ್ಷರೇ....

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೇ, ತಾವು ನನ್ನನ್ನು ರಕ್ಷಿಸಬೇಕು. ದಯವಿಟ್ಟು ಸ್ವಲ್ಪ ಕೇಳಿ. ಅದು ಅದದ್ದು ಏನು, ಇದರಿಂದ ರಾಜ್ಯಕ್ಕೆ ಆಗಲಿ, ಮತ್ತೊಂದಕ್ಕೆ ಆಗಲಿ ಏನಾಗಿದೆ ಎನ್ನುವ ವಿಷಯವನ್ನು ಬಿಟ್ಟು 12.15ಕ್ಕೆ ಇವರು ಚೆನ್ನೈನಲ್ಲಿ, ಇವರು ಇವರ ಜೊತೆಯಲ್ಲಿ ಹೇಳಿಕೆ.... ತಾವೇ ಹೇಳಿ ಅಲ್ಲಿ ಅವರು ಮೀಟಿಂಗ್ ಆದ ತಕ್ಷಣ ನಮ್ಮ ತೀರ್ಮಾನಗಳು ಆದ ತಕ್ಷಣ ಗೋಪಾಲ್ ಅವರನ್ನು ಕರೆಯಿಸಿ ನಾವು ಕಳುಹಿಸಿದ ತಕ್ಷಣ ಪ್ರೆಸ್ ಅವರು ಎಲ್ಲಾ ಸೇರಿದರು. ಆಗ ತಮಿಳುನಾಡಿನವರು ಈ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದರು. ಈ ಸಮಯದಲ್ಲಿ ಯಾರೋ ಒಬ್ಬ ಪ್ರೆಸ್‌ನವರು

ಕೇಳಿದರು " What about his wealth?" I said, " I don't know about his wealth. He is surrendering and I am satisfied with the result". ಇಷ್ಟು ಹೇಳಿ ಬಂದೆ, ಆಮೇಲೆ ಇಲ್ಲಿಗೆ ಎಂದ ತಕ್ಷಣ ಇಲ್ಲಿ ಪ್ರೆಸ್‌ನವರು ಮತ್ತೆ ನನಗೆ ಕೇಳಿದರು ಆಗ ನಾನು unitl I make a statement on the Floor of the House about what has happended, ಎಂದು ಹೇಳಿದ್ದೇನೆ ಇಷ್ಟು ಕೇಳಿದ್ದರು. ಇವರು ವಿರೋಧ ಪಕ್ಷದವರು ಹೇಳುತ್ತಿರುವುದು ಬಹಳ ಹೆಚ್ಚಾಯಿತು ಮಾನ್ಯ ಅಧ್ಯಕ್ಷರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲ ನೀವು ಇದು ಸರಿ ಅಲ್ಲ ಎಂದರೆ ಹೇಗೆ? ಇದು ನಮ್ಮ ತಕ್ಕು, ಈ ಸದನದಲ್ಲಿ ನೀವು ಹೇಳಬೇಕಾಗಿತ್ತು. ನಾವು ಕೇಳುವಂತಹ ಅಧಿಕಾರ ನಮಗೆ ಇದೆ.

(ಗೊಂದಲ)

ನೀವು ರಾಜ್ಯದ ಜನತೆಗೆ ತಿಳಿಸತಕ್ಕಂತಹದ್ದು ನಿಮ್ಮ ಪ್ರೈಮರಿ ರೆಸ್ಪಾನ್ಸಿಬಿಲಿಟಿ, ಇದೆ. ಆ ರೆಸ್ಪಾನ್ಸಿಬಿಲಿಟಿಯಿಂದ ನೀವು ಓಡುವುದಕ್ಕೆ ಸಾಧ್ಯ ಇಲ್ಲ. You cannot escape. You are answerable first here and then answerable to the Reporters or Chennai people.

(INTERRUPTIONS)

ಶ್ರೀ ಜೆ.ಹೆಚ್. ಪಟೇಲ್ : ಅಧ್ಯಕ್ಷರೇ, This is too much.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, Too much ಇಲ್ಲ, ಏನಿಲ್ಲ. ಯಾವಾಗ ನೀವು ಲ್ಲಿ ಅಧ್ಯಕ್ಷರೆ....

MR. SPEAKER : I will make a small correction.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನಿಮ್ಮನ್ನು ಕೇಳುತ್ತೇನೆ ಅಧ್ಯಕ್ಷರೇ, ಈ ಮನೆಯಲ್ಲಿ ವು ಒಂದು ಮಾತನ್ನು ಕೇಳಿ ಹೋದರೆ ತಪ್ಪು ಎಂದು ಹೇಳಿದರೆ ತಪ್ಪು ಎಂದು ಭಾವಿಸುತ್ತೇನೆ. ಇಲ್ಲಾ ತ್ರಿಕೆಯಲ್ಲಿ ಇವರು ಏನು ಹೇಳುತ್ತಾರೆ ಎಂದು ತಿಳಿದುಕೊಂಡು ನಾವು ಇಲ್ಲಿ ಕೇಳಬೇಕು. ಏನು ತೆದಿದೆ ಎಂದು. ಏಕೆ ಬೇರೆಯವರಿಗೆ ಇದರಲ್ಲಿ ಆಸಕ್ತಿ ಇಲ್ಲವಾ? ಬೇರೆಯವರು ಯಾರೂ ಕೂಡ ನಗೆ ಸಹಕಾರ ಮಾಡಿಲ್ಲವೇ?

ಶ್ರೀ ಜೆ.ಹೆಚ್. ಪಟೇಲ್ : ನಾನು ಈ ವಿಷಯದ ಬಗ್ಗೆ ಅಧ್ಯಕ್ಷರಿಗೆ ಪತ್ರ ಬರೆದು ಹೋಗಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಚರ್ಚೆಗೆ ತೆಗೆದುಕೊಳ್ಳಬೇಡಿ ಎಂದು ಹೇಳಿದಾಗ ವು ಬಿಟ್ಟಿದ್ದೇವೆ. ಅದನ್ನು ಬಿಟ್ಟು ನಾವು ಕೇಳುವುದೇ ಸರಿ ಇಲ್ಲ, ನೀವು ಏಕೆ ಕೇಳುತ್ತೀರಾ ಎಂದರೆ ಸದನ ಇರುವುದು ಏತಕ್ಕೆ ಸ್ವಾಮಿ?

MR. SPEAKER : I will help you. ಇಲ್ಲಿ ಒಂದು ಸಣ್ಣ ಕರೆಕ್ಷನ್ ಇದೆ ಅದನ್ನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಈ ರೀತಿಯಾಗಿ ಅವರ ಅಟಿಟ್ಯೂಡ್ ಇದ್ದು, ಮನೆಗೆ ಕಡೆಗಾಣಿಸಬೇಕು, ನಮಗೆ ಎಲ್ಲರಿಗೂ ಏನಪ್ಪಾ ಅಂದರೆ, ಅವರೇ ಮಾಡತಕ್ಕಂತದ್ದು,

ಬೇರೆ ಯಾರೂ ಕೂಡ ಇದರ ಬಗ್ಗೆ ಇನ್‌ಫರ್‌ಮೇಷನ್ ಇಲ್ಲ, ಹೇಳುವುದು ಇಲ್ಲ, ಕೇಳುವುದು ಇಲ್ಲ ಎಂದು ಆಟಿಟ್ಯೂಡ್ ಇಟ್ಟುಕೊಂಡು ಮುಖ್ಯಮಂತ್ರಿಗಳು ಹೋದರೆ ಇಂತಹ ಒಂದು ಹೇಳಿಕೆಗೆ ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ಏಕೆಂದರೆ ಆ ಒತ್ತೆಯಾಳುಗಳ ಬಗ್ಗೆ ನಮಗೂ ಕಾಳಜಿ ಇದೆ. ನಾವು ಸಂಪೂರ್ಣವಾಗಿ ಸಹಕಾರ ಕೊಟ್ಟಿದ್ದೇವೆ. ತಾವು ಕರೆದಲ್ಲಿ ಬಂದಿದ್ದೇವೆ. ಚರ್ಚೆ ಮಾಡಬಾರದು ಎಂಬುದನ್ನೂ ಕೂಡ ನಾವು ತಡೆ ಹಿಡಿದಿದ್ದೇವೆ. ಆದರೆ ಈ ರೀತಿಯಾಗಿ ಸದನಕ್ಕೆ ಕಡೆಗಣಿಸಿ, ಅಲ್ಲಿ ಹೇಳಿಕೆಯನ್ನು ಕೊಡತಕ್ಕಂತದ್ದು ಸರಿ ಅಲ್ಲ. ಅದನ್ನು ನಾವು ಪ್ರತಿಭಟಿಸಿ ವಾಕ್‌ಔಟ್ ಮಾಡುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಖರ್ಗೆ ಅವರೇ ಒಂದು ನಿಮಿಷ..

(ಗೊಂದಲ)

ಶ್ರೀ ಎನ್. ರಾಜಣ್ಣ : ಒಳ್ಳೆ ಕೆಲಸ ಆಗಿದೆ ಎಂದು ಹೇಳಿ ಅವರು ಸಂತೋಷ ಪಡಬೇಕು.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ ಸುರೇಶ್ before you could proceed.

(ಗೊಂದಲ)

ಶ್ರೀ ಎನ್. ರಾಜಣ್ಣ : ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಸಹ ಯಾರೂ ಏನು ಮಾಡುವುದಕ್ಕೆ ಆಗಲಿಲ್ಲ. ಅವರು ಈ ರೀತಿಯ ಒಳ್ಳೆಯ ಕೆಲಸ ಮಾಡಿರುವುದರಿಂದ ಸಂತೋಷ ಪಡಬೇಕು.

ಶ್ರೀ ಹೆಚ್. ಶಿವಪ್ಪ : ಆ ವಿಷಯದ ಬಗ್ಗೆ ಏನೂ ಮಾತನಾಡಲಿಲ್ಲ. ಮುಖ್ಯಮಂತ್ರಿಗಳ ತಂ ಏನೇನು ಅಚೀವ್‌ಮೆಂಟ್ ಮಾಡಿಕೊಂಡು ಬಂದಿದೆ, ಯಾರಿಗೆ ಒಳ್ಳೆಯದು ಆಗಿದೆ, ಒತ್ತೆಯಾಳುಗಳ ಏನು ಒಳ್ಳೆಯದಾಗಿದೆ, ಇದರ ಬಗ್ಗೆ ಒಂದು ಚಕಾರ ಕೂಡ ಇಲ್ಲ ಒಂದು ಶಬ್ದ ಇಲ್ಲ, ಒಂದು ಒಳ್ಳೇ ಮಾತು ಇಲ್ಲ. ಬರೀ technicalities ಬಗ್ಗೆ ಮಾತನಾಡುತ್ತಾ ಹೋದರೆ it shows...

4.20 ಪಿ.ಎಂ

MR. SPEAKER : Unfortunately he was in a bad mood. ಅವರು ಬಂದಮೆ ನಾನು ರಿಕ್ವೆಸ್ಟ್ ಮಾಡುತ್ತೇನೆ. ಇದರಲ್ಲಿ ಆದದ್ದು ಇಷ್ಟೇ, ನಿನ್ನೆ ದಿವಸ ಸದನ ಮುಂದೂಡಿದ ನಂತ ತಮಿಳು ನಾಡಿನ ಮುಖ್ಯ ಮಂತ್ರಿಗಳು ಈ ದಿವಸ ಬೆಳಿಗ್ಗೆ ಸಭೆ ಇರುತ್ತದೆ, ಆದಕಾರಣ ತಾವು ಬರಬೆ ಎನ್ನತಕ್ಕಂತಹ ಆಹ್ವಾನವನ್ನು ನಮ್ಮ ಮುಖ್ಯಮಂತ್ರಿಗಳಿಗೆ ಕಳುಹಿಸಿದರು. ಆಗ ನಮ್ಮ ಮುಖ್ಯಮಂತ್ರಿ ಆದಕ್ಕೆ ಸಂಬಂಧಿಸಿದ ಸಚಿವರನ್ನು ಕರೆದುಕೊಂಡು ಹೋಗಬೇಕಾದರೆ ನನಗೆ ಪತ್ರ ಬರೆದು ತಿಳಿಸಿ ರೀತಿ ಇದೆ, ನಾನು ಹೋಗುತ್ತಾ ಇದ್ದೇನೆ, ಆದಕಾರಣ ನಿಮ್ಮ ಅನುಮತಿ ಬೇಕು ಎಂದು ಹೇಳಿ ಅವ

ಹೋದರು. ಅಲ್ಲಿಗೆ ಹೋದಮೇಲೆ ನಮ್ಮ ಮುಖ್ಯಮಂತ್ರಿಗಳು ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಇಬ್ಬರೂ ಕುಳಿತುಕೊಂಡು ಮಾತನಾಡಿದ ನಂತರ ಕೆಲವು ತೀರ್ಮಾನಗಳು ಏನು ಮಾಡಿದ್ದಾರೆ, ಆ ತೀರ್ಮಾನಗಳನ್ನು ಆ ಸಭೆ ಆದನಂತರ ಆ ವಿಷಯವನ್ನು ಮೊದಲ ಬಾರಿಗೆ ನಮ್ಮ ಮುಖ್ಯಮಂತ್ರಿಗಳು ಇಲ್ಲೇ ಈ ಸದನದಲ್ಲೇ ಹೇಳುತ್ತಾ ಇದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಸೇರಿದ್ದಾಗ ತಾವಾಗೇ ಎಲ್ಲಾ ಪತ್ರಕರ್ತರು, ಟಿ.ವಿ. ರಿಪೋಟರ್ಸ್ ಅಲ್ಲಿ ಇದ್ದೇ ಇರುತ್ತಾರೆ. ಆ ಸಮಯದಲ್ಲಿ ಅವರೆಲ್ಲರೂ ಬಂದಾಗ, ಮಾತನಾಡುವುದಕ್ಕೆ ಪ್ರಯತ್ನ ಪಟ್ಟಾಗ ನಮ್ಮ ಮುಖ್ಯಮಂತ್ರಿಗಳು ನಾನು ಏನನ್ನೂ ಮಾತನಾಡುವುದಿಲ್ಲ ಎಂದು ಹೇಳಿ ಅವರನ್ನು ತಳ್ಳಿ ಬರುವುದಕ್ಕೆ ಆಗುವುದಿಲ್ಲ. ಷರತ್ತುಗಳು ಅಥವಾ ತೀರ್ಮಾನಗಳು ಅಲ್ಲಿ ಏನು ತೆಗೆದುಕೊಂಡಿದ್ದಾರೆ ಆ ವಿಚಾರ ಯಾವುದನ್ನೂ ಕೂಡ ಅವರು ಅಲ್ಲಿ ಹೇಳಿಲ್ಲ. ಅವರು ಏನು ಹೇಳಿದರು ಅಂದರೆ, ಅಲ್ಲಿ ಹೇಳತಕ್ಕಂತಹದ್ದು ಆಸ್ತಿ-ಪಾಸ್ತಿ ಬಗ್ಗೆ ಅದೆಲ್ಲಾ ನನಗೆ ಗೊತ್ತಿಲ್ಲಪ್ಪ ಎಂದು ಹೇಳಿ ಬಂದಿದ್ದಾರೆ. ಆದರೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆ ಅವರು ತಪ್ಪು ತಿಳಿದುಕೊಂಡಿದ್ದಾರೆ. ಅದು ಏನೆಂದರೆ ಮುಖ್ಯಮಂತ್ರಿಗಳು ಮಾತನಾಡತಕ್ಕಂತದ್ದನ್ನು ಎಲ್ಲಾ ವಿಚಾರವನ್ನು ಮೊದಲು ಚರ್ಚೆ ಮಾಡಿ ಆನಂತರ ಸದನಕ್ಕೆ ತಿಳಿಸುತ್ತಾ ಇದ್ದಾರೆ ಎನ್ನತಕ್ಕಂತಹ ಒಂದು ಕನ್‌ಫ್ಯೂಷನ್ ಅವರು ಇಟ್ಟುಕೊಂಡಿದ್ದಾರೆ. Let him come back. ಅವರಿಗೆ ಉತ್ತರ ಹೇಳೋಣ. ದಯಮಾಡಿ, ಗುರುಪಾದಪ್ಪನವರೇ, ಇಲ್ಲಿ ಸಭಾನಾಯಕರು ಎಷ್ಟು ಮುಖ್ಯವೋ ಪ್ರತಿಪಕ್ಷದ ನಾಯಕರೂ ಈ ಸಭೆಗೆ ಅಷ್ಟೇ ಮುಖ್ಯವಾದವರು. ಅವರು ಯಾವುದೋ ಒಂದು ಉದ್ವೇಗದಲ್ಲಿ, ಯಾವುದೋ ಒಂದು ವಿಚಾರವನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಅದನ್ನು ಸರಿಯಾಗಿ ತಿಳಿಸಿ, ಸತ್ಯಾಂಶ ಏನು ಎಂಬುದನ್ನು ತಿಳಿಸುವಂತಹ ಪ್ರಯತ್ನ ನಾವು ಮಾಡಬೇಕು. ನಮ್ಮ ಸಭಾನಾಯಕರು ಅತ್ಯಂತ ಸರಳವಾದ ರೀತಿಯಲ್ಲಿ ಏನು ವಾಸ್ತವಾಂಶ ಇತ್ತು ಅದೆಲ್ಲವನ್ನೂ ಸಭೆಗೆ ತಿಳಿಸಿದ್ದಾರೆ. ಆದುದರಿಂದ ಅದನ್ನು ಸುತ್ತಿ-ಬಳಸಿ ಹೋಗುವುದು ಬೇಡ. It is not an achievement ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಇದು ಒಂದು.

ಶ್ರೀ ಹೆಚ್. ಶಿವಪ್ಪ : ಅಲ್ಲ ಪರ್‌ಮನೆಂಟ್ ಸಲ್ಯೂಷನ್ ಸಿಕ್ಕಿದೆ ಇರತಕ್ಕಂಥದ್ದು ಒಂದು ಅಚೀವ್‌ಮೆಂಟ್ ಅಲ್ಲವೇ ಅಧ್ಯಕ್ಷರೇ, ಎಷ್ಟು ಕೋಟಿ ಖರ್ಚು ಮಾಡಿದ್ದೇವೆ ಎಂದು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ಈಗ ನಮಗೆ ಶಾಶ್ವತವಾಗಿ ಪರಿಹಾರ ಸಿಗುತ್ತಾ ಇದೆ ಎಂದು ಹೇಳಿದ್ದು ನಿಜವಾಗಿಯೂ ಇದು It is a great achievement.

(Interruptions)

ಅಧ್ಯಕ್ಷರು : ಗುರುಪಾದಪ್ಪನವರೇ, ಒಂದು ನಿಮಿಷ, please listen to me. We should be fair to the Hon'ble Leader of the Opposition as well as the remaining members of the Opposition in this House. ಅವರೂ ನಮಗೆ ಈ ವಿಚಾರದಲ್ಲಿ ಉದ್ದಕ್ಕೂ ನಮ್ಮ ಜೊತೆಯಲ್ಲಿ ಸಹಕಾರ ಕೊಟ್ಟಿದ್ದಾರೆ. ಚರ್ಚೆ ಮಾಡುವುದು ಬೇಡ ಎಂದು ಹೇಳಿದಾಗಲೆಲ್ಲಾ ಬೇಡ ಎಂದು ಒಪ್ಪಿಕೊಂಡಿದ್ದಾರೆ. ಅವರು ಇವತ್ತು ಆದದ್ದು ಒಳ್ಳೆಯದಲ್ಲ, ನೀವು ಏಕೆ ಹೋಗಿದ್ದೀರಿ, ಏಕೆ

ಮಾಡಿದಿರಿ ಎಂದು ಅಲ್ಲ, ಅವರಿಗೆ ಕನ್‌ಫ್ಯೂಷನ್, ಅಲ್ಲಿ ನಡೆದಂತಹ ತೀರ್ಮಾನಗಳನ್ನು ಮೊದಲು ಅಲ್ಲಿ ಹೇಳಿ, ಅನಂತರ ಇಲ್ಲಿ ಹೇಳುತ್ತಾ ಇದ್ದಾರೆ ಎನ್ನುವ ಮಾತನ್ನು ಹೇಳಿದರು. ಅದಕ್ಕೆ ನಾನು ಸ್ಪಷ್ಟಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮುಖ್ಯಮಂತ್ರಿಗಳು ಆ ಮೀಟಿಂಗ್‌ನಿಂದ ಹೊರಗೆ ಬಂದಾಗ ಪತ್ರಕರ್ತರಿಗೆ ಏನಾದರೂ ಹೇಳಿರಬಹುದೆ ಹೊರತು, ತೀರ್ಮಾನಗಳು ಏನಾಗಿದೆ ಅದನ್ನು ಇಲ್ಲೇ ಮೊದಲು ಹೇಳುತ್ತಾ ಇರುವುದು. ಅಲ್ಲಿ ಸಭೆ ಮುಗಿಸಿಕೊಂಡು ಇಲ್ಲಿಗೆ ಬಂದಿದ್ದಾರೆ. ಬಂದ ತಕ್ಷಣ ಸದನಕ್ಕೆ ಬಂದಿದ್ದಾರೆ. ಅವಕಾಶ ಕೊಟ್ಟ ತಕ್ಷಣ ಆ ವಿಷಯದ ಬಗ್ಗೆ ಹೇಳಿದ್ದಾರೆ. I think I am right. He has disclosed anything to the Press about what has beęn agreed upon between the two Chief Ministers.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿಮಾನ ನಿಲ್ದಾಣದಲ್ಲಿ ಪತ್ರಕರ್ತರು ಹೇಳಿದರೂ ಸಾಹೇಬರು ಹೇಳುವುದಿಲ್ಲ ಎಂದು ಹೇಳಿದರು.

MR. SPEAKER : He is right, when there is confusion, let us try to rectify it.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಸುಖಾಂತ್ಯ ಎಂದು ಹೇಳುತ್ತಿದ್ದೀರಿ, ಆದರೆ ನನಗೆ ಇನ್ನೂ ನಂಬಿಕೆ ಇಲ್ಲ. ಏಕೆಂದರೆ ವೀರಪ್ಪನ್ ನಡೆದುಕೊಂಡು ಬಂದ ದಾರಿ ನೋಡಿದರೆ ಬಹುಶಃ ನಿಮ್ಮನ್ನು ಸ್ವಾಗತ ಮಾಡುವುದಕ್ಕೆ ಬರಹೇಳಿ, ನಿಮಗೇನಾದರೂ ಅನಾಹುತ ಆದರೆ ಆಶ್ಚರ್ಯ ಪಡಬೇಕಾಗಿಲ್ಲ. ಆದ್ದರಿಂದ ನೀವು ಎಚ್ಚರಿಕೆಯಿಂದ ಇರಬೇಕು, ಸರ್ಕಾರ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆಕಸ್ಮಿಕವಾಗಿ ಸುಖಾಂತ್ಯವಾಯಿತು ಎಂದು ಇಟ್ಟುಕೊಳ್ಳಿ, ಅದಕ್ಕೆ ಅಭಿನಂದಿಸಬೇಕಾಗಿರುವುದು ನಕ್ಕೀರನ್ ಪತ್ರಿಕೆಯ ಸಂಪಾದಕರಾದ ಶ್ರೀ ಗೋಪಾಲನ್ ಅವರನ್ನು. ಈ ಕೀರ್ತಿಗೆ ಕರ್ನಾಟಕ ಸರ್ಕಾರ ಭುಜ ತಟ್ಟಿಕೊಳ್ಳುವುದು ಬೇಡ. ಅಭಿನಂದಿಸಬೇಕು ಎಂದು ಇದ್ದರೆ ಆತನನ್ನು ಅಭಿನಂದಿಸಬೇಕು. ಏಕೆಂದರೆ ಆತ ನನ್ನ ಜೀವನವನ್ನು ಪಣವಾಗಿ ಇಟ್ಟು ಕಾಡಿನಲ್ಲಿ ಪ್ರವೇಶ ಮಾಡಿದ್ದಾರೆ. ಅವನು ಹುಲಿ ಬಾಯಿಗೆ ಪ್ರವೇಶ ಮಾಡಿದ ಹಾಗೆ ಪ್ರವೇಶ ಮಾಡಿದ್ದಾನೆ. ಇದಕ್ಕೆ ತುಂಬಾ ಧೈರ್ಯ ಬೇಕು. ಆದಕಾರಣ ನೀವು ಅಭಿನಂದಿಸಬೇಕು ಎಂದು ಇದ್ದರೆ ಆತನನ್ನು ಅಭಿನಂದಿಸಬೇಕು. ಇನ್ನು ಉಳಿದ ವಿಚಾರ ತಾವು ಪ್ರಸ್ತಾಪ ಮಾಡಿದ್ದೀರಿ, ಇದರಲ್ಲಿ ಬಿಕ್ಕಟ್ಟು ಏನಿದೆ ಎನ್ನತಕ್ಕಂತಹದ್ದು ನಮಗಿಂತ ಹೆಚ್ಚಾಗಿ ಸರ್ಕಾರಕ್ಕೆ ಗೊತ್ತಿದೆ. ನಾನು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತು ಇದು ಅಂತ್ಯವಾಗುವವರಿಗೂ ಕಣ್ಣಲ್ಲಿ ಎಣ್ಣೆ ಇಟ್ಟುಕೊಂಡು ಬಹಳ ಎಚ್ಚರಿಕೆಯಿಂದ ವ್ಯವಹರಿಸಬೇಕು ಎಂದು ಒಂದು ಕಾಷನ್ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ ಹಾಗೆ ಏಕೋ ಈ ಸರ್ಕಾರ ಸದನವನ್ನು ಒಂದು ರ‍್ಯಾಟಿಫಿಕೇಷನ್ ಕಮಿಟಿ ಎಂದು ತಾವು ತಿಳಿದುಕೊಂಡಿದ್ದೀರಿ ಎಲ್ಲಾ ಬಂದು ಹೇಳಿ ನೀವು ರ‍್ಯಾಟಿಫೈ ಎಂದು ಒಂದು ಆದೇಶವನ್ನೋ, ಸೂಚನೆಯನ್ನೋ, ಒಂದು ಪ್ರಸಂಗನೋ ಸೃಷ್ಟಿ ಆಗುತ್ತಿದೆ. ಒಂದು ನಿಮಿಷ ನಾನು ಮಾತನಾಡುತ್ತೇನೆ.

(ಗೊಂದಲ)

ಶ್ರೀ ಹೆಚ್ . ಶಿವಪ್ಪ : ಅದು ಸಮಂಜಸವಾದುದು ಅಲ್ಲ It is not a ratification body.

(ಗೊಂದಲ)

ಅಧ್ಯಕ್ಷರು : ಬೆಳಿಗ್ಗೆ ಇದೇ ವಿಚಾರ ಪ್ರಸ್ತಾಪಕ್ಕೆ ಬಂತು. ಆಗ ನೀವೆಲ್ಲಾ ಎದ್ದು ನಿಂತುಕೊಂಡಿರಿ, ಸಿಂಧ್ಯಾ ಅವರು ಒಬ್ಬರೇ ಇದ್ದರು, ಲೀಡರ್ ಇದ್ದಾರೆ ಎಂದು ಸ್ವಲ್ಪ ಜನ ಹೆಚ್ಚಿಗೆ ಹೇಳುತ್ತಾರೆ. ಅದಕ್ಕೆ ನೀವು ಏಕೆ ಬೇಸರ ಮಾಡಿಕೊಳ್ಳುತ್ತೀರಿ?

ಶ್ರೀ ಹೆಚ್. ಶಿವಪ್ಪ : ನಮ್ಮ ನಾಯಕರು ಇದ್ದಾರೆ ಎಂದು ಮಾತನಾಡುತ್ತಾ ಇಲ್ಲ, ಇದು ನಮ್ಮ ಸ್ವಭಾವ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸರ್ಕಾರದ ಪರವಾಗಿ ಹೋರಾಟ ಮಾಡಿಯೇ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಶಿವರಾಮೇ ಗೌಡರು ಹೋರಾಟಗಾರರು, ಆದಕಾರಣ ಅವರನ್ನು ಅಭಿನಂದಿಸುತ್ತಾ ಇದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಸಭಾಧ್ಯಕ್ಷರೇ, ಈ ಹೆತ್ತ ಮಕ್ಕಳಿಗಿಂತ ಸಾಕು ಮಕ್ಕಳು ತಂದೆ-ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅದು ನಮ್ಮ ಅನುಭವ, ಇಲ್ಲೂ ಕೂಡ ನಮ್ಮ ಅನುಭವಕ್ಕೆ ಬರುತ್ತಾ ಇದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದು ನಿಮ್ಮ ಅನುಭವವೇ ಇದು, ಅಥವಾ ಯಾರ ಅನುಭವ ಇದು ?

ಶ್ರೀ ಎಸ್. ಸುರೇಶ್ ಕುಮಾರ್ : ಅದು ಇಡೀ ರಾಜ್ಯಕ್ಕೆ ಗೊತ್ತಾಗುತ್ತಾ ಇದೆ. ಸನ್ಮಾನ್ಯ ಅಧ್ಯಕ್ಷರೇ....

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಈ ವಿಷಯ ಎಷ್ಟು ಗಂಭೀರವಾದುದು, ನಾನು ನಂಜೇಗೌಡರ ಮಾತನ್ನು ಒಪ್ಪುತ್ತೇನೆ. ನಾವು ಹುಷಾರಾಗಿ ಇರಬೇಕು. ಇದು ಒಂದು, ಹತ್ತಾರು ವರ್ಷ, 24 ವರ್ಷ ಬಗೆ ಹರಿಯದಂತಹ ಸಮಸ್ಯೆ ಇವತ್ತು ಬಗೆ ಹರಿಯುವ ಸ್ಥಿತಿಗೆ ಬಂದಿದೆ ಎಂದರೆ, ವಿರೋಧ ಪಕ್ಷ ಎಂದರೆ ಬರೀ ಇದೇನಾ?

(ಗೊಂದಲ)

SRI J.H. PATEL : Are you convinced? Are you happy with your stand?

MR. SPEAKER : I am on my legs. Please resume your seats.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೇ, There is no minimum courtesy to congratulate the Government for having achieved so much, having brought a permanent solution to the problem. ಮಿನಿಮಂ ಕರ್ಟಸಿ ಬೇಡವೆ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಮಾತನಾಡುತ್ತೇನೆ ಇಲ್ಲಾ ಎಂದರೆ ಹೋಗುತ್ತೇನೆ. ನಮಗೆ ಬೇರೆ ದಾರಿ ಇಲ್ಲ. ಮುಖ್ಯಮಂತ್ರಿಗಳಿಗೆ ಸಿಟ್ಟು ಬರುತ್ತದೆ, ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ನಮಗೂ ಬಾಯಿಗೆ ಬಂದ ಹಾಗೆ ಮಾತನಾಡುವುದಕ್ಕೆ ಬರುವುದಿಲ್ಲವೇನು? ನಮಗೂ ಬರುತ್ತದೆ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್ : ನಾವುನು ಬಾಯಿಗೆ ಬಂದ ಹಾಗೆ ಮಾತನಾಡಲಿಲ್ಲ.

ಅಧ್ಯಕ್ಷರು : ಸ್ವಲ್ಪ ಕುಳಿತುಕೊಳ್ಳಿ. ನನಗೆ ಈ ಸದನದ ಸಾಂಪ್ರದಾಯ ಏನೆಂದರೆ ಅಧ್ಯಕ್ಷರಾದವರು ಅಪರೂಪಕ್ಕೆ ಎದ್ದು ನಿಲ್ಲಬೇಕು. ಹಾಗಾಗಿ ನಾನು ಪದೇ ಪದೇ ಎದ್ದು ನಿಲ್ಲುವುದಕ್ಕೆ ಇಷ್ಟಪಡುವುದಿಲ್ಲ. ಏನೋ ತೀರಾ ಅಸಮಾಧಾನ ಆದಾಗ ಎಲ್ಲೋ ಒಂದು ಕಡೆ, ನಾನು ಎದ್ದು ನಿಲ್ಲುವ ಉದ್ದೇಶವೇನೆಂದರೆ ನೀವೆಲ್ಲಾ ಕುಳಿತುಕೊಳ್ಳಬೇಕು. ಯಾರಾದರೂ ಅಸಂಬದ್ಧವಾಗಿರತಕ್ಕಂತಹದ್ದನ್ನು, ಅಗತ್ಯ ಇಲ್ಲದೇ ಇರತಕ್ಕಂತಹ ಮಾತನ್ನು ಯಾರಾದರೂ ಉದ್ವೇಗದಲ್ಲಿ ಯಾರಾದರೂ ಮಾತನಾಡಿದರೆ, ಕಡತ ತರಿಸಿ ನಾನು ನೋಡುತ್ತೇನೆ. ಅದರ ಬಗ್ಗೆ ನೀವು ಯಾರೂ ಕೂಡ ಕಾಳಜಿ ವಹಿಸಬೇಕಾಗಿಲ್ಲ, ಅದು ನನ್ನ ಜವಾಬ್ದಾರಿ ಅದನ್ನು ನಾನು ಮಾಡುತ್ತೇನೆ. ಸುರೇಶ್ ಅವರೇ, ಮುಖ್ಯಮಂತ್ರಿಗಳು ಹೇಳಿದ ಮಾತು ಏನೆಂದರೆ ಬಿಎಸ್ಎಫ್ ಅವರನ್ನೂ ಕೂಡ ಕರೆಸಿದ್ದವು. ಸಾವಿರ ಬಿಎಸ್ಎಫ್ ಅವರನ್ನು ಇಟ್ಟುಕೊಂಡು ಒಬ್ಬ ಜನರಲ್ ರ್ಯಾಂಕ್‌ನ ಅವರನ್ನು ಒಬ್ಬರನ್ನು ಇಟ್ಟುಕೊಂಡು ಪ್ರಯತ್ನ ಪಟ್ಟರೂ ಆತನನ್ನು ಹಿಡಿಯುವುದಕ್ಕೆ ಆಗಲಿಲ್ಲ. ನೀವು ಅಚೀವ್‌ಮೆಂಟ್ ಎಂದಾದರೂ ಹೇಳಿಕೊಳ್ಳಿ ಇನ್ನೊಂದಾದರೂ ಹೇಳಿಕೊಳ್ಳಿ. ಏನೋ ಒಂದು ತಂಟೆ ಪರಿಹಾರ ಆಯಿತು, ನೆಮ್ಮದಿ ಆಯಿತು. ನಾವು ಅದೇ ಕೆಲಸಕ್ಕೆ ಹೋಗಿ ಇಷ್ಟೆಲ್ಲಾ ಮಾಡಿಕೊಂಡು ಬಂದಿದ್ದೇವೆ. ಸಾಕಷ್ಟು ಶ್ರಮ ವಹಿಸಿದ್ದೇವೆ ಎನ್ನತಕ್ಕ ಮಾತನ್ನು ಹೃದಯಾಂತರಾಳದಿಂದ ಅವರು ನೋವಿನಿಂದ ಹೇಳಿದರೇ ಹೊರತು ನಿಮ್ಮ ಮಾತಿಗೆ ಅಡ್ಡಿಪಡಿಸಬೇಕು ಎಂದು, ಆಗಲೀ ಅಥವಾ ಬೇರೆ ಉದ್ದೇಶದಿಂದ ಅಲ್ಲ. ನೀವು ಏನು ಹೇಳಬೇಕು ಎಂದು ಇದ್ದೀರಿ, ಅದನ್ನು ಹೇಳಿ. ನಾನೇನು ಹೇಳುವುದು ಎಂದರೆ ಇರಬಹುದು still you may be in position. ಈಗ ಮಾನ್ಯ ನಂಜೇಗೌಡರು ಒಂದು ಮಾತನ್ನು ಹೇಳಿದರು. ಅನುಭವದಿಂದ ಟ್ರಾಕ್ ರೆಕಾರ್ಡ್‌ನ್ನು ನೋಡುವುದರಿಂದ ನಮಗೆ ಎಲ್ಲೋ ಒಂದು ಅನುಮಾನ ಇದೆ ಹುಷಾರಾಗಿರಬೇಕು. It is a good advice to the Government. Therefore let us debate in a more sober atmosphere. cordial atmosphere, try to exchange views in a more dignified manner.

ದಯಮಾಡಿ ಆ ತರಹ ಉದ್ವೇಗಕ್ಕೆ ಒಳಗಾಗಬೇಡಿ You can have your say. You are the Hon'ble Deputy Leader of the Bharatiya Janata party. Your leader is not there. It is your right. It is your entitlement. Please have your say.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನೋಡಿದಾಗ ನನ್ನ ಮನಸ್ಸಿಗೆ ಒಂದು ವಿಚಾರ ಬಂದಿದ್ದು. ಒಂದು ಸೆಂಟೆನ್ಸ್ ಸೇರಿಸಬೇಕಾಗಿತ್ತು. " I will tell the truth whole truth nothing but truth" ಎಂದು It was not the whole truth." ಏಕೆಂದರೆ ಹಿಂದೆ ಅವನು ನಕ್ಕೀರನ್ ಎಡಿಟರ್ ಜೊತೆಗೆ ಕ್ಯಾಸೆಟ್ ಕಳುಹಿಸಿದಾಗ ಒಂದು ಬಹಳ ಪ್ರಮುಖ ಅಂಶ ಇದ್ದದು ಐದು ಕೋಟಿ ರೂಪಾಯಿ ಬೇಡಿಕೆ. ಇವತ್ತು ಐದು ಕೋಟಿ ರೂಪಾಯಿಯ ಉಲ್ಲೇಖ ಕೂಡ ಇಲ್ಲದೇ ಆ ಎಂಟೋ ಒಂಭತ್ತು ಕಂಡೀಷನ್ಸ್‌ಗೆ ಒಪ್ಪಿಕೊಂಡಿದ್ದಾರೆ. ಅವನು ಏನು ಅಷ್ಟು ಉದ್ದಾರತೆ ತೋರಿಸಿದ್ದಾನೆಂದು ನನಗೆ ಅನಿಸುವುದಿಲ್ಲ. ಐದು ಕೋಟಿ ಈಗ ಕಂಡೀಷನ್‌ನಲ್ಲಿ ಇಲ್ಲವೇ? ಅದು ಮೂರೂವರೆ ಕೋಟಿ ರೂಪಾಯಿಗೆ ಇಳಿದಿದೆಯೇ? ಮೂರೂವರೆ ಕೋಟಿ ರೂಪಾಯಿನಲ್ಲಿ ಒಂದು ಕೋಟಿ, ಒಂದು ಕೋಟಿ, ಒಂದೂವರೆ ಕೋಟಿ ರೂಪಾಯಿ ಹೇಗೆ ರವಾನೆ ಆಗುತ್ತದೆ? ಇನ್ನು ನಾಲ್ಕೈದು ವರ್ಷ ಮಲೆ ಮಹಾದೇಶ್ವರ ರೇಂಜ್‌ನಲ್ಲಿ ಯಾವುದೇ ಕ್ವಾರಿ ಓನರ್‌ಗೆ ಅಲ್ಲಿ ಕಲ್ಲು ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲವೇ? ಬಹಳಷ್ಟು ವಿಚಾರ ಇದೆ. ಈ ಹೇಳಿಕೆಯಲ್ಲಿ ಅನೇಕ ಹೇಳದಿರುವಂತಹ ಸತ್ಯ ಸಂಗತಿಗಳು ಬಚ್ಚಿಟ್ಟುಕೊಂಡು ಬಿಟ್ಟಿದೆ. ಇದು ರಾಜ್ಯದ ಜನತೆಗೆ ಕೂಡ ಗೊತ್ತಾಗಬೇಕು. Abject surrender ಎಂದು ಇವತ್ತು ಜನತೆಗೆ ಅನ್ನಿಸುತ್ತಿದೆ. ಇವತ್ತು ತಾವು ಹೇಳಿದಿರಿ, ಒಂದು ಅಂತಿಮ ತೆರೆ ಬಿದ್ದು ಬಿಡಬೇಕು, ಮುಗಿದು ಹೋಗಿ ಬಿಡಲಿ 24 ವರ್ಷದಿಂದ ಇದ್ದಂತಹ ವಿಚಾರ ಎಂದು ಎಲ್ಲ ಹೇಳಿದ್ದನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ are we not creating a potential for many more Veerappans ? ಕೈಯಲ್ಲಿ ಕೋಪ ಇದ್ದರೆ ಇಡೀ ಸರ್ಕಾರ, ಇಡೀ ವ್ಯವಸ್ಥೆಯನ್ನು ಹೇಗೆ ಆಟ ಆಡಿಸಬಹುದು? ಅದಕ್ಕೋಸ್ಕರ ಕೇಳಿದ್ದು.

MR. SPEAKER : I have a question to you. You are also an Advocate by profession. Any person who is an Indian citizen who as committed even more heinous crimes, If he decides to surrender himself to the court, to the law, how can anybody prevent him? He will not be surrendering to Chief Minister of Karnataka or Chief Minister of Tamil Nadu. He is surrendering to the law of the land. He shall have to surrender only to the law of land. The two Chief Ministers do not have special powers with them wherein they can accept the surrender. No. It is very clear.

SRI S. SURESH KUMAR : Then, why these conditions ?

MR. SPEAKER : We would be in a more advantageous position to discuss all these things when once the so called event takes places. ನಾನು ಏನು ಹೇಳುತ್ತೇನೆ ಎಂದರೆ ಮಾತನಾಡುವ ಭರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಪ್ರೊವೊಕೇಟೀವ್ ವರ್ಡ್ ಯಾರಾದರೂ ಉಪಯೋಗಿಸಬಹುದು. He may say,"Alright, I have been in forest all these days" ಇಷ್ಟೆಲ್ಲಾ ಆಗಿದೆ. "let me get back to the forest" ಎನ್ನುವ ಒಂದು ಸ್ಥಿತಿಗೆ ಬರಬಹುದು. Let us not be guilty of committing that mistake. ಅದಕ್ಕೋಸ್ಕರ. Thus far and no further. in the interest of those hostages, nothing beyond that.

ಶ್ರೀ ಎಸ್. ಸುರೇಶ್ ಕುಮಾರ್ : ಸಭಾಧ್ಯಕ್ಷರೇ, I agree with you. Taking that care only ನಾನು ಕೂಡ ಅನೇಕ ವಿಚಾರಗಳಿಗೆ ಹೋಗದೆ ಇಷ್ಟು ಮಾತ್ರ ಪ್ರಸ್ತಾಪಿಸುತ್ತೇನೆ. ಅವರು ಹೇಳುತ್ತಿರುವಷ್ಟು ಸುಲಭ ಸಾಧ್ಯವಾಗಿಲ್ಲ. ಸನ್ಯಾನ್ಯ ನಮ್ಮ ಪ್ರಮುಖ ವಿರೋಧ ಪಕ್ಷದವರು ಆ ಟೆಕ್ನಿಕಲಿಟೀಸ್ ಮೇಲೆ ಏನು ಹೋಗಿದ್ದಾರೆ? ನಾವು ಈ ಕಂಡೀಷನ್ಸ್ ನಮಗೆ ಹೇಳುತ್ತಿರುವುದು ಪೂರ್ತಿ ಸತ್ಯ ಇಲ್ಲ. ಇಡೀ ರಾಜ್ಯದ ಜನತೆಗೆ ನೀವು ಬಹಳಷ್ಟು ಸಂಗತಿಗಳನ್ನು ಮುಚ್ಚಿಡುತ್ತಿದ್ದೀರಿ, ಅದಕ್ಕೋಸ್ಕರ ವೀರಪ್ಪನ್ ಸರೆಂಡರ್ ಏನು ಇದೆ, ಅದು ನಿಮಗೆ ನೀವೇ ಬೆನ್ನುತಟ್ಟಿಕೊಳ್ಳಬಹುದೇ ವಿನಃ it is not the surrender of Veerappan, it is the surrender of State Government. ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

MR. SPEAKER : Alright, we will go on with the speech.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ನಾನು ಕಂಡೀಷನ್ಸ್ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಇವತ್ತು ಏನು ಹೇಳಿದ್ದಾರೆ? ತಮಿಳುನಾಡಿನಲ್ಲಿಯೇ ಕೇಸ್‌ಗಳು ಎಲ್ಲಾ ನಡೆಯಬೇಕು, ತಮಿಳುನಾಡಿನಲ್ಲಿ ಜೈಲಿನಲ್ಲಿಯೇ ಇರಬೇಕು ಎನ್ನತಕ್ಕ ಕಂಡೀಷನ್ ಏನು ಇದೆ, ನನಗೆ ಅನಿಸುತ್ತಿದೆ. ಕರ್ನಾಟಕದಲ್ಲಿರತಕ್ಕಂತಹ ಜನತೆಯ ಹಕ್ಕು, ಕರ್ನಾಟಕದಲ್ಲಿರತಕ್ಕಂಥ ಕೋರ್ಟಿನ ಹಕ್ಕುಗಳನ್ನು ತೆಗೆದು ಹಾಕಿದ ಹಾಗೆ ಆಗುವುದಿಲ್ಲವೇ? ಇವತ್ತು ಯಾರು ಕೊಲೆ ಆಗಿದ್ದಾರೆ, ಅವರ ಮನೆಯವರು ನಾಳೆಯ ದಿವಸ ಕೋರ್ಟಿನಲ್ಲಿ ಹೋಗಿ ಅಪ್ಲಿಕೇಷನ್ ಹಾಕಿ ಈ ಕೇಸ್ ಅಲ್ಲಿ ನಡೆಯಬಾರದು, ಕರ್ನಾಟಕದಲ್ಲಿ ನಡೆಯಬೇಕು. ಸಾಕ್ಷಿಗಳು ಎಲ್ಲಾ ಇಲ್ಲಿದ್ದಾರೆ ಎಂದು ಹೇಳಿದರೆ ಇಲ್ಲಿ ನಡೆಯಬೇಕು ಎಂದು ಹೇಳುವ ಹಕ್ಕು ಇಲ್ಲವೇ?

ಅಧ್ಯಕ್ಷರು : ಸ್ವಲ್ಪ ದಯಮಾಡಿ ಈಗ ನಾನು ತಮ್ಮನ್ನು ಕೇಳುತ್ತೇನೆ.

ಶ್ರೀ ಎಸ್. ಶಿವಪ್ಪ : ಟ್ರಾನ್ಸ್‌ಫರ್ ಅಪ್ಲಿಕೇಷನ್ ಹಾಕುವುದಿಲ್ಲವೇ ಪ್ರಮೀಳಾ ಅವರೇ? ಟ್ರಾನ್ಸ್‌ಫರ್ ಅಪ್ಲಿಕೇಷನ್ ಹಾಕುತ್ತೇವೆ, to change the court.

ಅಧ್ಯಕ್ಷರು : ಈಗ ತಾವು ಹೇಳಿದಿರಿ. ಕ್ಯಾಂಪಿನಲ್ಲಿ ಆತ ತಮಿಳುನಾಡಿನಲ್ಲಿರುತ್ತಾರೆ. ಈ ಕೃತ್ಯಗಳು ನಡೆದಿರತಕ್ಕ ಜ್ಯುರಿಸ್‌ಡಿಕ್ಷನ್‌ನ ಯಾವ ಸೆಷನ್ ಕೋರ್ಟಿಗೆ ಬರುತ್ತದೆ? 302 ಎಂದರೆ ಎಲ್ಲಾ ಸೆಷನ್

ಕೋರ್ಟಿಗೆ ತಾನೇ ಬರುತ್ತದೆ? ಆ ಸೆಷನ್ ಪ್ರಕಾರ ಅವನು ಆ ಕೋರ್ಟಿಗೆ ಆತ ಹಾಜರಾಗಬೇಕಾಗಿದ್ದರೆ ಅಲ್ಲಿಂದ ಇಲ್ಲಿಗೆ ಕರೆದುಕೊಂಡು ಬರಲೇಬೇಕು. Judge will not go there and try the case there.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದನ್ನೇ ಹೇಳಿದ್ದು. ಈ ಕಂಡೀಷನ್ ಏನು ಹಾಕಿದ್ದಾರೆ.

MR. SPEAKER : If the case will have to be transferred from ತಾವೇ ಬೆಳಿಗ್ಗೆ ಹೇಳಿದಂತೆ it is the Supreme Court that has to take the decision.

ಶ್ರೀಮತಿ ಪ್ರಮೀಳಾ ನೇಸರ್ಗಿ : ಟ್ರಾನ್ಸ್‌ಫರ್ ಕೇಸ್ ಅಲ್ಲ ಅಧ್ಯಕ್ಷರೆ, ಸರೆಂಡರ್ ಬಗ್ಗೆ ನಾನು ಹೇಳುತ್ತಿರುವುದು. ಸರೆಂಡರ್ ಅಂದರೆ ಯಾವ ಕೋರ್ಟಿನ ಜ್ಯುರಿಸ್‌ಡಿಕ್ಷನ್‌ನಲ್ಲಿ ಅಪರಾಧ ಮಾಡಿರುತ್ತಾರೆ ಆ ಕೋರ್ಟಿಗೆ ಸರೆಂಡರ್ ಆದಾಗ ಅದಕ್ಕೆ ಸರೆಂಡರ್ ಎಂದು ಹೇಳುತ್ತಾರೆ. ನಿಮ್ಮ ಮಿನಿಸ್ಟರ್ ಮುಂದೆ, ಚೀಫ್ ಮಿನಿಸ್ಟರ್ ಮುಂದೆ ಸರೆಂಡರ್ ಆದರೆ, ಅದು ಸರೆಂಡರ್ ಆಗುವುದಿಲ್ಲ. ಇದು ಯಾವ ಕೋರ್ಟಿನ ಜ್ಯುರಿಸ್‌ಡಿಕ್ಷನ್‌ನೊಳಗೆ ಆಗಿದೆಯೋ ಅಲ್ಲಿಗೆ ಸರಂಡರ್ ಆಗಬೇಕಾಗುತ್ತದೆ. ಈಗ ಎಫ್‌ಐಆರ್ ಎಲ್ಲಿ ಹಾಕಿದ್ದಾರೆ, ಅಲ್ಲಿಗೆ ಬಂದು ಸರಂಡರ್ ಆದಾಗ ಅದು ಸರೆಂಡರ್ ಆಗುತ್ತದೆಯೇ ಹೊರತು ಬೇರೆ ಸರಂಡರ್ ಆಗುವುದಿಲ್ಲ. ಇಷ್ಟು ಗೊತ್ತಿದ್ದರೂ ಸಹ ನಮ್ಮ ಪೋಲಿಸ್ ಅಧಿಕಾರಿಗಳು ಅಡ್ವೈಸ್ ಮಾಡಲಿಲ್ಲವೇ?

MR. SPEAKER : ತಾವೂ ವಕೀಲರು. Suppose, a person has committed a crime in Banaras, he will come and surrender to police in Tirupathi. Is he forbidden from surrendering to the police in Tirupathi?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಹೇಳುತ್ತಿದ್ದೇನೆ. ಅದೂ ಸರೆಂಡರ್ ಆದ ಮೇಲೆ.

ಅಧ್ಯಕ್ಷರು : ಈಗ ದೆಹಲಿ ಕೇಸ್ ಆಯಿತಲ್ಲಾ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಲ್ಲಿ ಸರಂಡರ್ ಆದಾಗ the first thing which may be done ಇಲ್ಲಿಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಈ ಪೋಲೀಸ್ ಸ್ಟೇಷನ್ ವಿಚಾರ ಎಲ್ಲಿ ಬೇಕಾದರೂ ಅಪರಾಧ ಮಾಡಬಹುದು. ಯಾರಾದರೂ ಪೋಲೀಸ್‌ನವರು ಹಿಡಿದುಕೊಂಡು ಹೋಗಬಹುದು. ಆದರೆ ಯಾವ ಜ್ಯುರಿಸ್‌ಡಿಕ್ಷನ್ ಹೋಗಿರುತ್ತದೆಯೋ ಅಲ್ಲಿಗೆ ಕಳಿಸಿಕೊಡುತ್ತಾರೆ. ಯಾವುದೇ ಕಾರಣಕ್ಕೂ ಅವನು ಕರ್ನಾಟಕಕ್ಕೆ ಬರುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂಥದ್ದು ಹೇಳುವುದು ಇದೆಯಲ್ಲಾ ಅದು ಸಾಧುವಾದುದು ಅಲ್ಲ. ಕಾನೂನಿಗೆ ಸರಿಹೊಂದತಕ್ಕಂಥದ್ದು ಅಲ್ಲ. ಇವರಿಗೆ ಯಾರು ಕಾನೂನು ಅಡ್ವೈಸ್ ಕೊಟ್ಟಿದ್ದಾರೋ ನಾನಂತೂ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈಗಾಗಲೇ ವೀರಪ್ಪನ್ ಮದ್ರಾಸ್ ತಲುಪಿದ್ದಾರೆ. ಸರೆಂಡರ್ ಆಗಿದ್ದಾರೆ, ಇವೆಲ್ಲಾ ಕೂಡ ನಾಟಕ ಎನ್ನತಕ್ಕ ಮಾತನ್ನು ನಾನೂ ಕೂಡ ಕೇಳಿದ್ದೇನೆ. ಅದರಿಂದ ನನಗೆ ಅನ್ನಿಸುತ್ತಿದೆ, ಇದು ನಿಜವಾಗಿ ಮಾನ್ಯ ಸುರೇಶ ಕುಮಾರ್ ಅವರು ಏನು ಹೇಳಿದ್ದಾರೆ, ಹಾಗೆ ಮೇಲು-ನೋಟಕ್ಕೆ ಜನಗಳನ್ನು ಮರೆಸುವುದಕ್ಕೋಸ್ಕರ

ಹೇಳಿರತಕ್ಕ ವಿಷಯ. ಆದ್ದರಿಂದ ನಿಜವಾದ ವಿಷಯವನ್ನು ಮರೆಯಲ್ಲಿ ಇಟ್ಟುಕೊಂಡಿದ್ದಾರೆ ಎನ್ನತಕ್ಕ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ನಾನೂ ಸಹ ಸ್ವಲ್ಪ ಕಾನೂನನ್ನು ಓದಿದ್ದೇನೆ. ನಾವು ಇವತ್ತು ವಿಚಾರ ಮಾಡುತ್ತಿರತಕ್ಕದ್ದು ಎರಡೂ ರಾಜ್ಯಗಳಿಗೆ ಇದ್ದಂತಹ ಒಂದು ದೊಡ್ಡ ಮೆನೇಸ್ ಏನು ಇತ್ತು? ವಿಪತ್ತು ಏನು ಇತ್ತು, ಆ ವಿಪತ್ತನ್ನು ಪರಿಹಾರ ಮಾಡುವುದಕ್ಕೆ ಮೂಲತಃ ಸಮಸ್ಯೆ ಬಗೆಹರಿಸಬೇಕು ಎಂದರೆ ಬಾಲ ಹಿಡಿದುಕೊಂಡು ಆ ಕೋರ್ಟು ಈ ಕೋರ್ಟ್ ಕಛೇರಿಗೆ ಹೋಗಬೇಕಾಗಿತ್ತು. ನನಗೂ ಸಹ ಕೋರ್ಟು ಎಂದರೇನು? ಕೋರ್ಟುಗಳನ್ನು ಟ್ರಾನ್ಸ್‌ಫರ್ ಮಾಡುವುದು ಹೇಗೆ? ಸುಪ್ರೀಂ ಕೋರ್ಟ್ ಪರ್ಮಿಷನ್ ಬೇಕು ಇವೆಲ್ಲಾ ಗೊತ್ತಿದೆ. ಸಬ್ಜೆಕ್ಟ್ ಬಿಟ್ಟು ಯಾವುದೋ ಒಂದು ಇರೆಲೆವೆಂಟ್ ವಿಷಯ ಹಿಡಿದುಕೊಂಡು ಮಾತನಾಡುವುದು ಏನು ಇದು? ಅದೂ ಅಷ್ಟೊಂದು ಅನುಭವಸ್ಥ ಅಡ್ವೊಕೇಟ್ ನೀವು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇರ್ರೆಲೆವೆಂಟ್ ಅಲ್ಲ.

ಶ್ರೀ ಜೆ.ಹೆಚ್. ಪಟೇಲ್ : ತಾವು ಕೇಳಿ. I am not discussing about the legality.

ಶ್ರೀಮತಿ ಪ್ರಮೀಳಾ ನೇಸರ್ಗಿ : ಯಾವುದು ಇರ್ರೆಲೆವೆಂಟ್? I am not telling any irrelevant subject. ನೀವು ಹೇಳುವ ಮುಂಚೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್: ಆ ತರಹ ತಾವು ಹೇಳಿದ ಹಾಗೆ ಈ ಭಾರತದ ದಂಡ ಸಂಹಿತೆ ಏನು ಇದೆ ಕಾನೂನಿಗೆ ಸರಂಡರ್ ಆಗುತ್ತಾನೆ. ಹೇಗೆ ಆಗಬೇಕು ಎನ್ನುವುದನ್ನು ಆಕಸ್ಮಿಕವಾಗಿ ಎರಡೂ ರಾಜ್ಯಗಳಿಗೆ ಸಂಬಂಧಪಟ್ಟಿರುವುದರಿಂದ ನಾವು ಹೇಳುತ್ತೇವೆ. ಚಂಬಲ್ ಕಣಿವೆಯಲ್ಲಿ ಇದ್ದರೆ ನಾವು ಹೇಳುತ್ತಿರಲಿಲ್ಲ. ತಮಿಳುನಾಡು ಮತ್ತು ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಕೇಸುಗಳು ಇದ್ದಾವೆ. ಕಾನೂನು ಪ್ರಕಾರ ಹೇಗೆ ಟ್ರೈ ಮಾಡಬೇಕು? ಆದ್ದರಿಂದ ಆತನೂ ಕಾನೂನು ಪ್ರಕಾರವೇ ನಾನು ಹೋಗಬೇಕು ಎಂದು ತಿಳಿದುಕೊಂಡೇ ಸರಂಡರ್ ಆಗಿದ್ದುದು. ಫ್ರೀಯಾಗಿ ಬಿಟ್ಟು ಬಿಡಿ ಎಂದಲ್ಲ. ಇಷ್ಟೆಲ್ಲಾ ಹೇಳಿದ ಮೇಲೂ ಇಷ್ಟು ಷರತ್ತಿಗೆ ನಾವು ಒಪ್ಪಿಕೊಂಡಿದ್ದೇವೆ ಎಂದು ಹೇಳಿದರೂ, ಇದೊಂದು ಎಂಟು ಜನರು ಇದ್ದಾರಲ್ಲಾ ಅವರ ಮನೆಯವರಿಗೆ ಏನಾಗಬೇಕು? ಅವರ ಮನೆಯವರು, ಮಕ್ಕಳು, ಕುಟುಂಬದವರಿಗೆ ನಾವು ಸಹಾಯ ಮಾಡುತ್ತೇವೆಂದು ಸರ್ಕಾರ ಹೇಳಿದರೆ ಇವರು ವಾಕೌಟ್ ಮಾಡಿದರು ಎಂದು ಹೇಳಿದರೆ ಏನಾಗುತ್ತದೆ? ಆ ಎಂಟು ಮನೆತನದ ಜನರನ್ನು ತೆಗೆದು ಹಾಕಿ ಬಿಡೋಣವಾ? ಮತ್ತೆ ಅದೇ ಅರ್ಥ ಬರುತ್ತದೆ.

ಶ್ರೀ ಎಂ. ಶ್ರೀನಿವಾಸ್ : ಆ ಎಂಟು ಜನರನ್ನು ಕೊಂದು ಬಿಡಿ ಎಂದು ನಾವು ಹೇಳಿಲ್ಲ. ನಾವು ಚರ್ಚೆ ಮಾಡಿದ ಮಾತಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕರ್ನಾಟಕದ ಪೂರ್ತಿ ಶರಣಾಗತಿ ತಮಿಳುನಾಡಿಗೆ.

ಶ್ರೀ ಎಂ. ಶ್ರೀನಿವಾಸ್ : ಅವರನ್ನು ಬಿಡಿಸಬೇಕು ಎಂದು ಹೇಳುತ್ತಿರುವುದು ನಾವು ಕೊಂದು ಬಿಡು ಎಂದು ಹೇಳಿಲ್ಲ.

ಶ್ರೀ ಜೆ.ಎಚ್. ಪಟೇಲ್ : ಸರ್ಕಾರದ ಉದ್ದೇಶ ಸ್ಪಷ್ಟ. ಈಗ ಹೋಸ್ಟೇಜಸ್ ಏನು ಇದ್ದಾರೆ ಅವರನ್ನು ಬಿಡಿಸುವುದು. first priority, whatever has been done, has been done 60 ಜನರನ್ನು ಕೊಂದಿದ್ದಾನೆ, ನೂರಾರು ಆನೆಗಳನ್ನು ಕೊಂದಿದ್ದಾನೆ. ಈ ಎಂಟು ಜನರನ್ನೂ ಕೊಂದು ಅವರು ವಾಪಸ್ ಬರುವುದಾದರೆ ನನ್ನದೇನೂ ಅಭ್ಯಂತರ ಇಲ್ಲ. ನಾನು ಅದನ್ನು ಯೋಚನೆ ಮಾಡಿ ಈ ಒತ್ತೆಯಾಳುಗಳು ಏನು ಇದ್ದಾರೆ ಅವರನ್ನು ಬಿಡಿಸಿಕೊಳ್ಳಬೇಕು. ಬಿಡಿಸಿಕೊಳ್ಳುವುದಕ್ಕೆ ಹಲವಾರು ಮಾರ್ಗಗಳು ಇದ್ದಾವೆ. ಅದನ್ನು ನಾವು ಇಲ್ಲಿ ಚರ್ಚೆ ಮಾಡುವುದು ಬೇಡ. ಆತ ತಿಳಿದುಕೊಂಡು ಸ್ವಯಂಪ್ರೇರಿತನಾಗಿ ನನಗೆ ಒಂದು ಕ್ಯಾಸೆಟ್ ಕಳುಹಿಸಿದ. ಇಲ್ಲದಿದ್ದರೆ ನಾನೇನೂ ಅವನ ಹತ್ತಿರ ಹೋಗಲಿಲ್ಲ. ದಯವಿಟ್ಟು ಈಗ ನಾನು ತಯಾರು ಇದ್ದೇನೆ ಎಂದು ತಮಿಳಿನಲ್ಲಿ ಆಡ್ರೆಸ್ ಮಾಡಿ ನನಗೆ ಮತ್ತು ಕರುಣಾನಿಧಿಯವರಿಗೆ ಆಡ್ರೆಸ್ ಮಾಡಿ ಒಂದು ಕ್ಯಾಸೆಟ್ ಕಳುಹಿಸಿದರು. ಅದರ ಪ್ರಕಾರ ನಾವು ಇವತ್ತು ಹೋಗಿದ್ದೇವೆ. ಇದನ್ನು ಹೇಗೆ ಹ್ಯಾಂಡಲ್ ಮಾಡಬೇಕು ಎನ್ನುವುದನ್ನು ನೀವು ಸರ್ಕಾರಕ್ಕೆ ಬಿಡಿ. ಇದನ್ನು ಚರ್ಚಾ ವಸ್ತು ಮಾಡಿಕೊಂಡರೆ ಅದರ ಇಂಪ್ಲಾಟೆನ್ಸ್ ಹೋಗುತ್ತದೆ. ಪರಿಣಾಮ ಅಷ್ಟು ಸರಿಯಾಗಿ ಇರುವುದಿಲ್ಲ. ನನಗೆ ನಾಳೆ ಏನಾದರೂ ಲೀಗಲ್ ಅಡ್ವೈಸ್ ಬೇಕಾದರೆ ಪ್ರಮೀಳಾರವರನ್ನೇ ಕೇಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನ್ನ ಲೀಗಲ್ ಅಡ್ವೈಸ್ ಕೇಳಿದ್ದರೆ, ಕರ್ನಾಟಕಕ್ಕೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಕರ್ನಾಟಕವನ್ನು ತಮಿಳುನಾಡಿಗೆ ಶರಣಾಗತಿಯಾಗುವುದಕ್ಕೆ ಬಿಡುತ್ತಿರಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ವೀರಪ್ಪನ್ ಇತಿಹಾಸವನ್ನು ಗಮನಿಸಿದಾಗ, ಅನೇಕ ಘಟನೆಗಳು ನಡೆದು ಅನೇಕ ಪ್ರಾಮಾಣಿಕ ಪೋಲೀಸ್ ಅಧಿಕಾರಿಗಳ ಪ್ರಾಣವನ್ನು ಕೊಟ್ಟರು. ಇಷ್ಟೆಲ್ಲಾ ಶ್ರಮವಾಗಿ ಕರ್ನಾಟಕ ಜನತೆಯ ಕೋಟ್ಯಾಂತರ ರೂಪಾಯಿಯ ತೆರಿಗೆ ವಿನಿಯೋಗವಾದ ನಂತರ ಆತ ಮಾನಸಿಕವಾಗಿ ದೈಹಿಕವಾಗಿ ಸಾಕಷ್ಟು ಸುಸ್ತು ಆಗಿದ್ದ. ಆತನಿಗೆ ಶರಣಾಗತಿ ಬಿಟ್ಟು ಬೇರೆ ದಾರಿ ಇರಲಿಲ್ಲ.

ಅಧ್ಯಕ್ಷರು : ಈ ಮಾತುಗಳೆಲ್ಲಾ ಬೇಡ. ನೋಡಿ ನೀವೆಲ್ಲಾ ಸದಸ್ಯರು, ಈ ಸದನದಲ್ಲಿ ಮಾತನಾಡತಕ್ಕ ವಿಚಾರ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕ ಹಕ್ಕು ತಮಗೆ ಇರುತ್ತದೆ. ಅದಕ್ಕೆ ನಾನು ಅಡ್ಡಿ ಪಡಿಸಲ್ಲ. ನಾವು ಇಲ್ಲಿ ಆಡತಕ್ಕ ಮಾತುಗಳು ಆತ ಮತ್ತು ಆತನ ತೀರ್ಮಾನವನ್ನು ಬದಲಾಯಿಸುವುದಕ್ಕೆ ಅವಕಾಶ ಮಾಡಿಕೊಡುವುದಾದರೆ ಎಲ್ಲೋ ಒಂದು ಕಡೆ ನಾವು ಅಪರಾಧಿಗಳಾಗುತ್ತೇವೋ ಎಂದು. ಆದುದರಿಂದ ಈ ವಿಷಯದ ಬಗ್ಗೆ 8-10 ದಿವಸ ಬಿಟ್ಟು ಚರ್ಚೆ ಮಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ : ವೀರಪ್ಪನ್ ವಿಷಯ ಪ್ರಸ್ತಾಪ ಆದಾಗಲೆಲ್ಲಾ ಈ ಸಂದರ್ಭಗಳಲ್ಲೆಲ್ಲಾ ಈ ಮಾತನ್ನು ಕೇಳಿ, ಕೇಳಿ ನಮಗೆ ಸಾಕಾಗಿದೆ. ವೀರಪ್ಪನ್ ಎಂದು ಬರುತ್ತಿದ್ದ ಹಾಗೆ, ಅದೊಂದು

ಏನೋ ದೆವ್ವ, ಭೂತ, ಪಿಶಾಚಿ, ಅದರ ಸುದ್ದಿಗೆ ಹೋಗಬೇಡಿ, ಮುಟ್ಟಬೇಡಿ ಅನ್ನುವ ಮಾತು ಅಭ್ಯಾಸ ಆಗಿ ಹೋಗಿದೆ. ಹಾಗಾಗಿ ಇವತ್ತು ಪ್ರಶ್ನೆ ಬಂದಿರುವುದು ರಾಜ್ಯ ಸರ್ಕಾರ ಒಂದು ರೀತಿಯ ಷರತ್ತುಗಳಿಗೆ ಒಪ್ಪಿಕೊಂಡು, ಅವನು ಸರಂಡರ್ ಆಗಿಲ್ಲ, ರಾಜ್ಯ ಸರ್ಕಾರವೇ ಆತನಿಗೆ ಸರೆಂಡರ್ ಆಗಿ, ಈ ರೀತಿಯ ಕಂಡೀಷನ್‌ಗೆ ಒಪ್ಪಿಕೊಂಡು ವಿರೋಧ ಪಕ್ಷಗಳನ್ನು ಕೂಡ ಪೂರ್ಣ ತಾತ್ಸಾರ ಭಾವನೆಯಿಂದ ಸರ್ಕಾರ ಮಾಡಿರತಕ್ಕ ಸ್ಥಿತಿಯನ್ನು, ಇದು ಪ್ರಜಾಪ್ರಭುತ್ವ ವಿರೋಧವಾಗಿದೆಯೆಂದು, ಇದು ಜನತೆಗೆ ಮಾಡಿರತಕ್ಕ ದ್ರೋಹವೆಂದು ಹೇಳಿಕೊಂಡು ಭಾರತೀಯ ಜನತಾ ಪಕ್ಷ ಕೂಡ ಸಭಾತ್ಯಾಗ ಮಾಡುತ್ತದೆ.

(ಭಾರತೀಯ ಜನತ ಪಕ್ಷದ ಸದಸ್ಯರು ಈ ಹಂತದಲ್ಲಿ ಸಭಾತ್ಯಾಗವನ್ನು ಮಾಡಿದರು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ಇವರು ಹೀಗೆ ವಾಕ್‌ಔಟ್ ಮಾಡಿದರೆ ಜನ ಏನು ತಿಳಿದುಕೊಳ್ಳುತ್ತಾರೆ? ಅವನು ಸರೆಂಡರ್ ಆಗಲೇಬಾರದಿತ್ತು ಎಂಬುದು ಇವರ ಅಭಿಪ್ರಾಯ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಏನೋ ಒಳ್ಳೆಯ ಕೆಲಸ ಆಯಿತಪ್ಪ ಬಹಳ ದಿವಸಗಳಿಂದ ಈ ಸಮಸ್ಯೆ ಇತ್ತು, ಬಗೆಹರಿಯಿತು ನೂರಾರು ಜನ ಪ್ರಾಣ ಕೊಟ್ಟಿದ್ದರು ಎಂದು ಹೇಳುವುದು ಬಿಟ್ಟು ಕಾಂಗ್ರೆಸ್‌ನವರು, ಬಿಜೆಪಿನವರೂ ವಾಕ್‌ಔಟ್ ಮಾಡಿದರೆ ಜನ ಇವರ ಉದ್ದೇಶ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಈ ವಿಷಯದಲ್ಲಿ ಹೆಚ್ಚು ಮಾತನಾಡುವುದಿಲ್ಲ. ನಾನು ತಮ್ಮ ಮುಖಾಂತರ ಹೇಳುವುದು ಏನೆಂದರೆ ವೀರಪ್ಪನ್ ಯಾರನ್ನು ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿದ್ದಾನೆ, ಅವರನ್ನು ಅವರ ಜೀವಕ್ಕೆ ಹಾನಿ ಇಲ್ಲದಂತೆ ಬಿಡುಗಡೆ ಮಾಡುವವರಿಗೂ ನನ್ನ ಅಭಿಪ್ರಾಯದಲ್ಲಿ ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ. ಅವರ ಬಿಡುಗಡೆ ಆದಮೇಲೆ ಎಲ್ಲಾ ವಿಷಯವನ್ನು ಒಂದು ದಿವಸ ಪೂರ್ತಿಯಾಗಿ ಚರ್ಚೆ ಮಾಡೋಣ. ಯಾವ ಯಾವ ಸರ್ಕಾರ ಇದಕ್ಕೆ ವಿರುದ್ಧವಾಗಿದೆ, ಯಾರ್ಯಾರು ವಿರುದ್ಧವಾಗಿದ್ದಾರೆ ಎಂದು ಆಗ ಇಡೀ ದಿವಸ ಮಾತನಾಡುವುದಕ್ಕೆ ಅವಕಾಶ ಕೊಡಿ. ಆ ಎಂಟು ಜನರು ಜೀವವನ್ನು ಉಳಿಸಿಕೊಂಡು ಆಚೆ ಬರುವವರೆಗೆ ದಯವಿಟ್ಟು ಯಾರು ಈ ವಿಷಯದ ಬಗ್ಗೆ ಚರ್ಚೆ ಮಾಡಬಾರದು. ನಾನು ಎಲ್ಲಾ ಸದಸ್ಯರನ್ನು ಹಾಗೂ ಎಲ್ಲಾ ವಿರೋಧ ಪಕ್ಷದ ನಾಯಕರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಿಜವಾಗಿ ವೀರಪ್ಪನ್ ವಿಷಯದ ಬಗ್ಗೆ ನಾವೆಲ್ಲರೂ ತಲೆ ತಗ್ಗಿಸಿಕೊಂಡು ಕುಳಿತುಕೊಳ್ಳಬೇಕಾಗಿದೆ. ಇಂಥ ಒಬ್ಬ ವ್ಯಕ್ತಿ ಎರಡು ರಾಜ್ಯಕ್ಕೆ ಸವಾಲ್ ಆದನಲ್ಲಾ ಎಂದು ಎಷ್ಟೊಂದು ಅಮಾಯಕ ಜನರನ್ನು ನಾವು ಬಲಿ ಕೊಟ್ಟಿದ್ದೇವೆ. ಅದರಲ್ಲೂ ಈ ಎಂಟು ಜನರ ಪ್ರಾಣ ಎಷ್ಟು ಮುಖ್ಯ ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ವಿರೋಧ ಪಕ್ಷವೆಂದರೆ ಎಲ್ಲವನ್ನೂ ವಿರೋಧ ಮಾಡುವುದು ಅಲ್ಲ. ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಶ್ರೀರಾಮರೆಡ್ಡಿಯವರು ಹೇಳಿದಂತಹ ವಿಷಯಕ್ಕೆ ನನ್ನ ಬೆಂಬಲವನ್ನೂ ನೀಡುತ್ತಾ ಮೊದಲು ಆ ಎಂಟು

ಜನರನ್ನು ಕರ್ನಾಟಕಕ್ಕೆ ಕರೆದುಕೊಂಡು ಬಂದು ಅವರ ಮನೆಗೆ ಸೇರಿಸಿ ನಂತರ ನಾವು ಯಾವ ರೀತಿ ಆದರೂ ಫೈಟ್ ಮಾಡೋಣ.

ಅಧ್ಯಕ್ಷರು: ಈಗ ಒಂದು ಪ್ರಕಟಣೆ.

ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 103ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 19ನೇ ಆಗಸ್ಟ್ 1997 ರಂದು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತು. ಸದರಿ ವಿಧೇಯಕಕ್ಕೆ ವಿಧಾನ ಸಭೆಯ ಸಹಮತಿಯನ್ನು ನೀಡಬೇಕೆಂದು ಈ ಮೂಲಕ ಕೋರುತ್ತೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು
ಅಧ್ಯಕ್ಷ ಪೀಠವನ್ನಂಕರಿಸಿದರು).

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಅನೇಕ ಬೇಡಿಕೆಗಳ ಮೇಲೆ ಮಂತ್ರಿಯವರು ತಮ್ಮ ಇಲಾಖೆಯ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ಇದರಲ್ಲಿ ಕೆಲವು ಬಹಳ ಪ್ರಾಮುಖವಾಗಿರತಕ್ಕ ಕೆಲವು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ತಾವು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಮೊದಲನೇಯದಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇವತ್ತು ಎಲ್ಲಾ ಇಲಾಖೆಗಳಲ್ಲೂ ವಿಶೇಷವಾಗಿ ಜನಾಡಳಿತ ಮತ್ತು ಭೂಕಂದಾಯ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ಹೀಗೆ ಕೆಲವು ಬೇಡಿಕೆಗಳ ಮೇಲೆ ನನ್ನ ಮಾತುಗಳನ್ನು ಸೀಮಿತಗೊಳಿಸಿ ಮಾತನಾಡುತ್ತೇನೆ. ಇವತ್ತು ನಾವು ಸ್ವಾತಂತ್ರ್ಯೋತ್ಸವ ಸುವರ್ಣಾ ಮಹೋತ್ಸವನ್ನು ಈಗಾಗಲೇ ಆಚರಿಸಿದ್ದೇವೆ. ಈ ಒಂದು ಸಂದರ್ಭದಲ್ಲಿ ನಾವೆಲ್ಲರೂ ಕೂಡ ಬಹುಶಃ ಈ 50 ವರ್ಷಗಳ ಆಡಳಿತದ ಬಗ್ಗೆ ಪರಾಮರ್ಶಿಸಬೇಕಾದಂತಹ ಕಾಲಾವಕಾಶ ನಮಗೆ ಬಂದಿದೆ. ದುರ್ದೈವ ಮತ್ತು ಇವತ್ತು 50 ವರ್ಷಗಳನ್ನು ದಾಟಿದರೂ ಕೂಡ ಬೇರೆ ಬೇರೆ ಇಲಾಖೆಗಳಲ್ಲಿ ಅನೇಕ ನ್ಯೂನತೆಗಳನ್ನು ನಾವು ಇವತ್ತು ಕಾಣುತ್ತಿದ್ದೇವೆ. ಅದನ್ನು ಸರಿಪಡಿಸಲಿಕ್ಕೆ ಇವತ್ತು ಸಾಧ್ಯವಾಗುತ್ತಿಲ್ಲ, ಆದರೆ ಒಂದು ಮಾತು ಜಿಲ್ಲಾಡಳಿತದ ಮಾತು ಆಡುವಾಗ ಬಹುಶಃ ನಾನೂ ಕೂಡ ಹೊಸ ಜಿಲ್ಲಾ